# ECHO OF HIS CALL

# ಕರೆಯ ಪ್ರತಿಧ್ವನಿ

KANNADA

India's National Spiritual Newspaper

₹ 10/-

ECHO OF HIS CALL 1969-2019 GOLDEN JUBILEE

REACHING NATIONS

Published monthly in ENGLISH, TAMIL, MALAYALAM, TELUGU, HINDI, KANNADA, MARATHI, BENGALI, GUJARATI, ODIYA, ASSAMESE, PUNJABI, NEPALI, URDU, SINHALA & AFRIKAN

Editor : S. SAM SELVA RAJ | 16 Languages | Associate Editor : Rev. R. Rama Krishna

Vol. XXVII | YEAR OF OUR LORD JESUS CHRIST, 2025 JULY | No.06


## ಪರಿಶುದ್ಧ ಸತ್ಯವೇದ

ದಯಮಾಡಿ ಈ ಕೆಳಗಿನ ವಚನಗಳನ್ನು ಕಂಠಪಾಠ ಮಾಡಿರಿ.

**ಕೀರ್ತನೆ 8:1-9**

1. ನಮ್ಮ ಕರ್ತನಾದ ಯೆಹೋವನೇ, ನಿನ್ನ ನಾಮವು ಭೂಲೋಕದಲ್ಲೆಲ್ಲಾ ಎಷ್ಟೋ ಮಹಿಮೆಯುಳ್ಳದ್ದು. ಆಕಾಶಮಂಡಲದಲ್ಲಿ ನಿನ್ನ ವೈಭವವನ್ನು ಪ್ರಕಾಶಪಡಿಸಿದ್ದಿ.
2. ನಿನಗೆ ವಿರೋಧವಾಗಿ ನಿಂತು ಮುಯ್ಯಿ ತೀರಿಸುವ ವೈರಿಗಳ ಬಾಯನ್ನು ಕಟ್ಟುವುದ ಕ್ಕೋಸ್ಕರ ನೀನು ಬಾಲಕರ ಮತ್ತು ಮೊಲೆಕೂಸುಗಳ ಬಾಯಿಂದ ಬಲವಾದ ಸಾಕ್ಷಿ ಉಂಟಾಗು ವಂತೆ ಮಾಡಿದ್ದಿ.
3. ನಿನ್ನ ಕೈಕೆಲಸವಾಗಿರುವ ಆಕಾಶ ಮಂಡಲ ವನ್ನೂ ನೀನು ಉಂಟು ಮಾಡಿದ ಚಂದ್ರ ನಕ್ಷತ್ರಗಳನ್ನೂ ನಾನು ನೋಡುವಾಗ.
4. ಮನುಷ್ಯನು ಎಷ್ಟು ಮಾತ್ರದವನು, ಅವನನ್ನು ನೀನು ಯಾಕೆ ನೆನಸಬೇಕು? ಮಾನವನು ಎಷ್ಟರವನು, ಅವನಲ್ಲಿ ಯಾಕೆ ಲಕ್ಷ್ಯ ವಿಡಬೇಕು?
5. ಅವನನ್ನು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದಿಯಲ್ಲಾ; ಪ್ರಭಾವವನ್ನೂ ಮಾನವನನ್ನೂ ಅವನಿಗೆ ಕಿರೀಟವಾಗಿ ಇಟ್ಟೆ.
6. ನೀನು ಸೃಷ್ಟಿಸಿದ ಎಲ್ಲಾ ವಸ್ತುಗಳ ಮೇಲೆ ಪ್ರಭುತ್ವವನ್ನು ಅವನಿಗೆ ಅನುಗ್ರಹಿಸಿದಿ.
7. ನೀನು ಎಲ್ಲಾ ಕುರಿದನಗಳನ್ನು ಮಾತ್ರವೇ ಅಲ್ಲದೆ ಕಾಡುಮೃಗಗಳು.
8. ಆಕಾಶಪಕ್ಷಿಗಳು, ಸಮುದ್ರದ ಮೀನುಗಳು ಅದರಲ್ಲಿ ಸಂಚರಿಸುವ ಸಕಲ ವಿಧವಾಗಿ ಜೀವಜಂತುಗಳು ಇವೆಲ್ಲವನ್ನೂ ಅವನಿಗೆ ಅಧೀನ ಮಾಡಿದ್ದೀಯಲ್ಲವೇ.
9. ನಮ್ಮ ಕರ್ತನಾದ ಯೆಹೋವನೇ, ನಿನ್ನ ನಾಮವು ಭೂಲೋಕದಲ್ಲೆಲ್ಲಾ ಎಷ್ಟೋ ಮಹಿಮೆಯುಳ್ಳದ್ದು.

## ನೀವು ಫಲವನ್ನು ಕೊಡುವುದಕ್ಕಾಗಿ ಆರಿಸಲ್ಪಟ್ಟಿದ್ದಿರಿ !

**YOU ARE CHOSEN TO BEAR FRUIT!** *ಸಹೋದರಿ. ಏಂಜಲ್*





ನಮ್ಮ ಕರ್ತನು ಮತ್ತು ರಕ್ಷಕನಾಗಿರುವ ಯೇಸುಕ್ರಿಸ್ತನ ಸರಿಸಾಟಿಯಿಲ್ಲದ ನಾಮದಲ್ಲಿ ನಿಮಗೆ ಶುಭಾಶಯಗಳು!.

2025 ರ ದ್ವಿತೀಯಾರ್ಧದಲ್ಲಿ ಹೆಜ್ಜೆ ಹಾಕಲು ಮನೋಹರವಾಗಿ ಅನುಮತಿಸಿದ್ದಕ್ಕಾಗಿ ನಾನು ದೇವರಿಗೆ ಧನ್ಯವಾದಗಳನ್ನು ಮತ್ತು ಸ್ತೋತ್ರವನ್ನು ಸಲ್ಲಿಸುತ್ತೇನೆ! ಆತನ ನಂಬಿಗಸ್ತಿಕೆಯು ದೊಡ್ಡದಾಗಿದೆ!

ಈ ವರ್ಷದಲ್ಲಿ ನಾವು ಮುಂದುವರಿಯು ವಾಗ, ಇನ್ನೂ ನಮ್ಮಲ್ಲಿ ಎಷ್ಟು ಜನರು ಹೊಸ ವರ್ಷದ ತೀರ್ಮಾನಗಳನ್ನು ಹಿಡಿದು ಕೊಂಡಿದ್ದರೆಂದು ನನಗೆ ಆಶ್ಚರ್ಯವಾಗುತ್ತದೆ. ಅದರ ತೀರ್ಮಾನಗಳ ಫಲಿತಾಂಶದಿಂದ ಈ ಹೊತ್ತು ನಾವು ಏನಾಗಿದ್ದೇವೆ. ನಿನ್ನೆ ಮಾಡಿದ ತೀರ್ಮಾನಗಳು. ಅದೇ ರೀತಿಯಾಗಿ, ಈ ಹೊತ್ತು ನಾವು ಮಾಡುವ ತೀರ್ಮಾನಗಳ ಮೇಲೆ ಆಧಾರವಾಗಿದೆ ನಾಳೆ ನಾವು ಏನು ಆಗುತ್ತವೆ ಎಂದು. ಪ್ರತಿಯೊಂದು ಆಯ್ಕೆಗಳು ಪರಿಣಾಮಗಳನ್ನು ನಡೆಸುತ್ತವೆ.

(3 ನೇ ಪುಟಕ್ಕೆ)




**Echo of His Call**

*Christian YouTube Channel!*

**An opportunity to pray with Pr. S. Sam Selva Raj!**

Message & Prayer in 5 minutes!!

**English, Hindi, Tamil & Telugu**

Every day – From 2.00 A.M.

**Tamil Sunday Service – 8.30 A.M.**

★ Please Subscribe and Share ★

# ECHO OF HIS CALL - (1969-2019 GOLDEN JUBILEE YEAR)

## *from your dearly beloved brother...*



ECHO OF HIS CALL 1969-2019
REACHING NATIONS



### OUR MISSION POLICY

We should expound and teach the contemporary generation the undiluted teachings of the ancient and early Apostles. It is the need of the hour.

HON. EDITOR-IN-CHIEF
Rev. Angeline S. Kumari, M.A., M.Sc., M.Ed.
EX MANAGING EDITOR
Pastor Alex Samson Sam, B.Th., M.Div.
GENERAL MANAGER
Bro. N. Prakasam, M.A., M.Sc.(C&P), PGDHRM, MBA.
ADMINISTRATION
Sis. Jesy Veena Sam
Adv. K. Puratchivendan, M.Com., C.A., B.L.
Dr. P.E.R. Premchand, M.Sc., M.A., M.Ed., Ph.D.
Dr. C.G.S. Baburao, B.Tech., M.Tech. (DM), Ph.D.
Dr. Rabinder Boaz, M.S. (CMC)
EDITORIAL BOARD
Dr. Serena Bevin, M.A., M.Phil., B.Ed.
Sis. Sajini Cherian
Rev. Dr. K.R. Rajasekaran
Rev. Dr. William Robert, Ph.D., DD, D.Lit.
EDITOR, PUBLISHER & PRINTER

Pastor S. SAM SELVA RAJ
Echo of His Call Printers
10, Mohammed Abdullah 2nd Street,
Chepauk, Chennai- 600 005, India.
Phone : (+ 91- 44) 2852 8282, 2852 9293, 2854 7766
Cell : (+91) 98410 71852, 98412 71858 95661 31858
E.MAIL
sam@echoofhiscall.org
biblecor@yahoo.co.in
WEBSITES
www.echoofhiscall.org
www.stpaulsmatriculation.org
YOUTUBE CHANNEL
Echo of His Call

**ಯೆಹೋವನು ನಿನ್ನ ಭರವಸೆಗೆ ಆಧಾರನಾಗಿದ್ದು ನಿನ್ನ ಕಾಲಪಾಶಕ್ಕೆ ಸಿಕ್ಕದಂತೆ ನಿನ್ನನ್ನು ಕಾಪಾಡುವನು.**

**- ಜ್ಞಾನೋಕ್ತಿಗಳು 3:26**

ಕ್ರಿಸ್ತಯೇಸುವಿನಲ್ಲಿ ನನ್ನ ಆತ್ಮೀಯ ಸ್ನೇಹಿತರೇ,

ನಮ್ಮ ರಕ್ಷಕನಾಗಿರುವ ಯೇಸುಕ್ರಿಸ್ತನ ಮತ್ತು ನಮ್ಮ ಕರ್ತನಾದ ಅತಿಶ್ರೇಷ್ಠವಾದ ನಾಮದಲ್ಲಿ ನಿಮಗೆ ಶುಭಾಶಯಗಳು!

ಸಾರ್ವಭೌಮ ದೇವರ ಕೃಪೆಯಿಂದ, ನಾವು ವಿಶೇಷವಾದ ತಿಂಗಳಾದ ಜೂನ್ ತಿಂಗಳ ಮೂಲಕವಾಗಿ ಬಂದಿದ್ದೇವೆ. ಇದು ನಮ್ಮ ಸೇವೆಯ ವಿವಿಧ ಕ್ಷೇತ್ರಗಳಲ್ಲಿ ತೀವ್ರವಾದ ಚಟುವಟಿಕೆಯಿಂದ ತುಂಬದ ಋತುವಾಗಿತ್ತು. ಆತನ **ಕರೆಯ ಸೇವೆ ಪತ್ರಿಕೆ,** ಸುವಾರ್ತಾ ಮುದ್ರಣಾಲಯ, ಮುಖ್ಯ ಸಭೆ ಮತ್ತು ಶಾಖಾ ಸಭೆಗಳು. **ಬೈಬಲ್ ಕೋರ್,** ಸತ್ಯವೇದ ದೂರಶಿಕ್ಷಣ ಕೋರ್ಸ್‌ಗಳು, **ದೈವಶಾಸ್ತ್ರದ ದೂರಶಿಕ್ಷಣ ಕೋರ್ಸ್‌ಗಳು, ನೆಹಮೀಯ ಸತ್ಯವೇದ ಕಾಲೇಜುಗಳು, ಸಂತ ಪೌಲ್ ಮೆಟ್ರಿಕ್ಯುಲೇಶನ್ ಕ್ರೈಸ್ತ ಆಂಗ್ಲ ಪ್ರೌಢಶಾಲೆ.** ರಜಾಕಾಲದ ಮಕ್ಕಳ ಸೇವೆ, ಯೌವ್ವಸ್ಥರ ಸೇವೆ, ದವಾಖಾನೆಯ ಸೇವೆ, ಪುರುಷ ಮತ್ತು ಮಹಿಳೆಯ ಸೇವೆಗಳು, ಸೇವೆಯ ಕೇಂದ್ರಗಳು, ಯೂಟುಬ್ ಸೇವೆ ಮತ್ತು ಮುಂತಾದ ಆಡಳಿತ ಗುಂಪುಗಳು ಮತ್ತು ಕುಟುಂಬಗಳು.

ಈ ವೈವಿಧ್ಯಮಯ ಪ್ರದೇಶಗಳಲ್ಲಿ ನೂರಾರು ಬದ್ದ ವ್ಯಕ್ತಿಗಳು ನಿಷ್ಠೆಯಿಂದ ಶ್ರಮಿಸಿದ್ದಾರೆ. ನಮ್ಮ ಮುಖ್ಯ ನಾಯಕರುಗಳು ನಿರಂತರವಾಗಿ ಪ್ರಾರ್ಥನೆ, ಕಾರ್ಯತಂತ್ರದ ಯೋಜನೆಗಳು ಮತ್ತು ಕ್ಷೇತ್ರದ ಪ್ರತಿಕ್ರಿಯೆಯನ್ನು



*Key Leaders gathered for monthly prayer in Church*

ಪರಿಶೀಲಿಸಲು ಪ್ರತಿತಿಂಗಳು ಕೂಡಿ ಬರುತ್ತಾರೆ. ಆತನ ಹೇರಳವಾದ ಕೃಪೆಗೆ ನಾವು ಕರ್ತನಿಗೆ ಕೃತಜ್ಞತೆಯುಳ್ಳವರಾಗಿದ್ದೇವೆ.

ನಮ್ಮ ವಿಶೇಷವಾದ ಯೌವ್ವಸ್ಥರ ಕೂಟವು ಜೂನ್ 07, 2025 ರಂದು **ಸಂತ ಪೌಲ್ ಮೆಟ್ರಿಕ್ಯುಲೇಶನ್ ಶಾಲೆಯ** ಅವರಣದಲ್ಲಿ ಅಯೋಜಿಸಲಾಗಿತ್ತು. ಸುಮಾರು 200 ಕ್ಕಿಂತ ಹೆಚ್ಚು ಹುಡುಗ ಮತ್ತು ಹುಡುಗಿಯರು ಹಾಜರಿ ಯಾಗಿದ್ದರು. ಅದು ಶಕ್ತಿಯುತ ಅಭಿಷೇಕದ ಸಮಯವಾಗಿತ್ತು. ಯೌವ್ವನಸ್ಥರು ತಮ್ಮ ಭವಿಷ್ಯ ಮತ್ತು ಕರೆಯುವಿಕೆಗಾಗಿ ದೈವತ್ವದ ದರ್ಶನವನ್ನು ಪಡೆದುಕೊಂಡರು. ನಾವು ಈಗಾಗಲೇ ಅವರ ಜೀವನದಲ್ಲಿ ನಿಜವಾದ ಆಧ್ಯಾತ್ಮಿಕ ರೂಪಾಂತರವನ್ನು ನೋಡಲು ಪ್ರಾರಂಭಿಸಿದ್ದೇವೆ. ಗಮನಾರ್ಹವಾಗಿ





*Special Youth Camp*

ಅವರ ಹೊಸ ಜೀವನವು ಅವರ ಕುಟುಂಬಗಳಲ್ಲಿ ಸಕಾರಾತ್ಮಕ ಬದಲಾವಣೆಯನ್ನು ಪ್ರೇರೇಪಿಸುತ್ತದೆ. ವಿಶೇಷವಾಗಿ ಅವರ ಹೆತ್ತವರಲ್ಲಿ. ಈ ದೊಡ್ಡ ಆತ್ಮನ ನಡೆಸುವಿಕೆಗಾಗಿ ನಾವು ದೇವರಿಗೆ ಮಹಿಮೆಯನ್ನು ಸಲ್ಲಿಸುತ್ತೇವೆ!

ನಮ್ಮ **ಮುಖ್ಯ ಸಭೆ ಚಿಪಾಕ್‌ನಲ್ಲಿ ಮತ್ತು ಶಾಖಸಭೆ ಸಂತೋಷ ಪುರಂ**ನಲ್ಲಿ ಜೂನ್ 20 ರಿಂದ 22 ರವರೆಗೆ ಕುಟುಂಬ ಆಶೀರ್ವಾದ ಕೂಟಗಳನ್ನು ಆಯೋಜಿಸಲಾಗಿತ್ತು. ಆದಕ್ಕಾಗಿ ದೇವರಿಗೆ ಧನ್ಯವಾದಗಳು. ಕರ್ತನು ಕೃಪೆಯಿಂದ ಹೇರಳವಾದ ಆಶೀರ್ವಾದಗಳನ್ನು ಸುರಿಸಿದನು. ಹೇರಳವಾದ ಆತ್ಮೀಕ ಸುಗ್ಗಿಯನ್ನು ನಾವು ಸಾಕ್ಷಿಯಾಗಿ ನೋಡಿದೆವು. ನಿಮ್ಮ ನಂಬಿಕೆಯ ಪ್ರಾರ್ಥನೆಗಳಿಗಾಗಿ ನಾವು ನಿಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇವೆ!

ನಮ್ಮ ಎಲ್ಲಾ ಸೇವೆಗಳಿಗಾಗಿ ನೀವು ನಿರಂತರವಾಗಿ ಪ್ರಾರ್ಥನೆ ಮಾಡಬೇಕೆಂದು ನಾವು ನಿಮ್ಮನ್ನು ದೀನತೆಯಿಂದ ಮನವಿ ಮಾಡಿಕೊಳ್ಳುತ್ತೇವೆ. ನಾವು ವಿಧವಿಧವಾದ ಸೇವೆಗಳಲ್ಲಿ ತೊಡಗಿಕೊಂಡಿದ್ದೇವೆ. ನಾವು ಕತ್ತಲೆಯ ಶಕ್ತಿಗಳ ವಿರುದ್ಧ ಆಧ್ಯಾತ್ಮಿಕ ಯುದ್ಧದ ಮುಂಚೂಣಿಯಲ್ಲಿ ನಿಂತಾಗ, ನಾವು ಅನೇಕ ಸವಾಲುಗಳನ್ನು ಮತ್ತು ಅಡೆತಡೆಗಳನ್ನು ಎದುರಿಸುತ್ತಾ ಇದ್ದೇವೆ. ನಿಮ್ಮ ಪ್ರಾರ್ಥನೆಗಳು ಮತ್ತು ಮಾತುಗಳನ್ನು ವ್ಯಕ್ತಪಡಿಸುವುದಕ್ಕಿಂತ ಹೆಚ್ಚು ಬೆಂಬಲವಾಗಿವೆ. ದೇವರು ನಿಮ್ಮನ್ನು ಅಧಿಕವಾಗಿ ಆಶೀರ್ವದಿಸಲಿ

**ಆತನ ಕರೆಯ ಪ್ರತಿಧ್ವನಿಯ ತಂಡ**

E.mail : sam@echoofhiscall.org

*(1ನೇ ಪುಟದಿಂದ)*

ಪ್ರತಿದಿನ, ನಾವು ಅಸಂಖ್ಯಾತ ನಿರ್ಧಾರಗಳನ್ನು ಎದುರಿಸುತ್ತೇವೆ, ಏನು ತಿನ್ನಬೇಕು, ಏನು ಒದ್ದುಕೊಳ್ಳಬೇಕು, ಕೆಲಸಕ್ಕೆ ಹೋಗಬೇಕ ಅಥವಾ ಬೇಡವಾ ಇನ್ನು ಮುಂತಾದವುಗಳು. ನಾವು ಅನೇಕ ಸಾರಿ ಅರಿತುಕೊಳ್ಳದೆ ನೂರಾರು ಆಯ್ಕೆಗಳನ್ನು ಮಾಡುತ್ತೇವೆ.

ಈ ಎಲ್ಲಾ ಆಯ್ಕೆಗಳ ಮಧ್ಯದಲ್ಲಿ, ಯೇಸುಕ್ರಿಸ್ತನು ಹೇಳುವ ಸ್ವರವನ್ನು ನೀವು ಕೇಳಿಸಿಕೊಳ್ಳಿ. ನಾನು ನಿನ್ನನ್ನು ಆರಿಸಿಕೊಂಡಿದ್ದೇನೆ!

ಯೋಹಾನ 15:16 ಹೇಳುತ್ತದೆ. **ನಾನು ನಿಮ್ಮನ್ನು ಆರಿಸಿ ತೆಗೆದುಕೊಂಡೆನು.**

ಈ ವಚನವು ನಮಗೆ ಸವಾಲು ಹಾಕುತ್ತದೆ. ಸ್ವ ನಿರ್ಣಯದ ನಮ್ಮ ಆಧುನಿಕ ಕಲ್ಪನೆಯ ಬಗ್ಗೆ. ನಾವು ಅನೇಕ ಸಾರಿ ನಮ್ಮ ಆಯ್ಕೆಗಳಿಗಾಗಿ ಗರ್ವಪಡುತ್ತೇವೆ. ವಿಶೇಷವಾಗಿ ನಮ್ಮ ಆತ್ಮಿಕ ನಡೆಯಲ್ಲಿ. ಆದರೆ ಯೇಸುಕ್ರಿಸ್ತನು ಆ ಒಂದು ದೃಷ್ಟಿಕೋನವನ್ನು ಕೆಳಗೆ ಮೇಲೆ ಮಾಡುತ್ತಾನೆ. ಪ್ರಾರಂಭದಿಂದ ದೇವರು ನಮ್ಮನ್ನು ತನ್ನ ಕಡೆಗೆ ಸೆಳೆಯುತ್ತಾ ಇದ್ದಾನೆ.

ಪುರಾತನ ಯೆಹೂದಿ ಸಂಪ್ರದಾಯದ ಪ್ರಕಾರ, ಶಿಷ್ಯರು ತಮ್ಮ ಗುರುಗಳನ್ನು

## VERY URGENT NOTICE!




There may be unavoidable disruptions in the postal dispatch of **Echo of His Call** in the near future. If you wish to continue receiving **Echo of His Call** without interruption, please send us your name, address, email, and WhatsApp number via letter, email, phone call, or SMS/WhatsApp message immediately.

Your support helps us serve you better!

**Our address:**

**ECHO OF HIS CALL,**
10, Mohammed Abdullah 2nd Street, Chepauk, Chennai-600 005, India
Cell: (+91) 98412 71858 / 98410 71858 E.mail: sam@echoofhiscall.org

## PRAYER REQUEST:



Kindly uphold our 3-Day Family Camp, scheduled for August 8 to 10, 2025, in your prayers.

ಹುಡುಕಬೇಕಾಗಿತ್ತು. ಆದರೆ ಯೇಸುಕ್ರಿಸ್ತನು ಇದನ್ನು ತಿರುಗು ಮುರುಗು ಮಾಡಿದನು. ಆತನು ನಮ್ಮನ್ನು ಆರಿಸಿಕೊಂಡವನಾಗಿದ್ದಾನೆ.

## 1. ಸಂದರ್ಭವನ್ನು ಅರ್ಥ ಮಾಡಿಕೊಳ್ಳುವುದು !

ಈ ವಚನದ ಗೂಢಾರ್ಥವನ್ನು ಗ್ರಹಿಸುವಾಗ, ಯೇಸುಕ್ರಿಸ್ತನು ಯಾವ ಸಂದರ್ಭದಲ್ಲಿ ಮಾತನಾಡಿದ್ದಾನೋ ಎಂಬುದನ್ನು ಗಮನಿಸುವುದು ಬಹಳ ಪ್ರಾಮುಖ್ಯವಾಗಿದೆ. ಆ ಕ್ಷಣದಲ್ಲಿ ಐತಿಹಾಸಿಕ ಜೋಡುವಿಕೆ ಮತ್ತು ಅವರ ಶಿಷ್ಯರ ಭಾವನಾತ್ಮಕ ಸ್ಥಿತಿ.

## 2. ಐತಿಹಾಸಿಕ ಸಂದರ್ಭ !

ಯೋಹಾನ 15:16 ಯೇಸುಕ್ರಿಸ್ತನು ತನ್ನ ಅಂತಿಮ ಕರ್ತನ ಭೋಜನ ಸಮಯದಲ್ಲಿ ಯೆಹೂದಿ ಜನರಿಗೆ ಪ್ರಾಮುಖ್ಯತೆ ಹೊಂದಿರುವ ಕ್ಷಣದಲ್ಲಿ ಮಾತನಾಡುತ್ತಾನೆ. ಅದು ರಾಷ್ಟ್ರವಾಗಿ ಅದರ ಗುರುತು ಮತ್ತು ವಿಮೋಚನೆಯನ್ನು ಸ್ಮರಿಸಿದಂತೆ. ಈ ಒಂದು ಪವಿತ್ರ ಸಭೆಯಲ್ಲಿ ಯೇಸುಕ್ರಿಸ್ತನು ದೇವ ಜನರು ಎಂದರೇನು ಎಂದು ಮರು ವ್ಯಾಖ್ಯಾನಿಸುತ್ತಾನೆ.

ಆತನು ಬಾಡಿಗೆ ಮನೆಯ ಮೇಲೆ ಕೂತುಕೊಂಡಿದ್ದಾನೆ. ಅದು ಯೆರುಸಲೇಮಿನಲ್ಲಿ, ಇಲ್ಲಿಯೇ ಆತನು ಕರ್ತನ ಭೋಜನವನ್ನು ಸ್ಥಾಪಿಸಿದನು. ಅದೇ ರೀತಿಯಲ್ಲಿ, ಆತನು ತನ್ನ ಕೊನೆಯ ಬೋಧನೆಯನ್ನು ಬಿಡುಗಡೆ ಮಾಡುತ್ತಾನೆ. ತನ್ನ ಅಂತಿಮ ಪ್ರವಚನ. ಅವುಗಳು ಕೇವಲ ಸಾಧಾರಣ ಮಾತುಗಳಲ್ಲ. ಆತನು ನಿರ್ಗಮನ ನಂತರ ಶಿಷ್ಯರನ್ನು ತಯಾರಿಸಲು ಮತ್ತು ಉಳಿಸಿಕೊಳ್ಳಲು ಉದ್ದೇಶಿಸಿರುವ ನಿರ್ಣಾಯಕ ಸತ್ಯಗಳು.

ಇದು ಯೇಸುಕ್ರಿಸ್ತನ ಅಂತಿಮ ಗಳಿಗೆಯಲ್ಲಿ ಯೇಸುಕ್ರಿಸ್ತನ ಮಾತುಗಳ ತುರ್ತು ಮತ್ತು ತೂಕವನ್ನು ಎತ್ತಿತೋರಿಸುತ್ತದೆ. ಆ ಒಂದು ಮಾತುಗಳು ಆಳವಾದ ಉದ್ದೇಶಗಳಿಂದ ತುಂಬಿವೆ. ಪ್ರೀತಿ ಮತ್ತು ದೈವತ್ವದ ದೂರದೃಷ್ಟಿಯಿಂದ ತುಂಬಿವೆ.

## 3. ಶಿಷ್ಯರ ಮಾನಸಿಕ ಸ್ಥಿತಿ !

ಶಿಷ್ಯರ ಮಾನಸಿಕ ಸ್ಥಿತಿಯನ್ನು ಊಹಿಸಿ ಕೊಳ್ಳಿರಿ. ಅವರು ಯೇಸುಕ್ರಿಸ್ತನೊಂದಿಗೆ ಸುಮಾರು 3 ವರ್ಷಗಳು ಇದ್ದರು. ಆತನೊಂದಿಗೆ ನಡೆದರು, ಆತನೊಂದಿಗೆ ಊಟ ಮಾಡಿದರು, ಆತನೊಂದಿಗೆ ಸೇವೆ ಮಾಡಿದರು ಮತ್ತು ಹಗಲು ಮತ್ತು ರಾತ್ರಿ ಆತನಿಂದ ಕಲಿತುಕೊಂಡರು. ಬಹಳ ಪ್ರಾಮುಖ್ಯವಾಗಿ ಆತನನ್ನು ಸ್ವ ಇಚ್ಛೆಯಿಂದ ಮತ್ತು ಪೂರ್ಣ ಹೃದಯದಿಂದ ಅನುಸರಿಸಲು ಅವರು ಹೊಂದಿದ್ದ ಎಲ್ಲವನ್ನೂ ಅವರು ಬಿಟ್ಟರು.

ಈಗ, ತಕ್ಷಣ ಅವರು ತಮ್ಮ ಗುರುವಿನಿಂದ ತೊಂದರೆಗೀಡಾದ ಮಾತುಗಳನ್ನು ಕೇಳುತ್ತಿದ್ದಾರೆ. ಆತನು ಸಾಯಲಿಕ್ಕೆ ಹೋಗುತ್ತಾ ಇದ್ದಾನೆ. ಅವರಲ್ಲಿ ಒಬ್ಬನು ಆತನನ್ನು ಹಿಡಿದುಕೊಡುತ್ತಾನೆ ಮತ್ತು ಇನ್ನೊಬ್ಬನು ಆತನನ್ನು ತಿರಸ್ಕರಿಸುತ್ತಾನೆ. ಅವರು ಅನುಭವಿಸಿದ ಪ್ರಕ್ಷುಬ್ಧತೆಯನ್ನು ನೀವು ಊಹಿಸಬಲ್ಲಿರಾ? ಅವರ ಇಡೀ ಪ್ರಪಂಚವು ಅವರ ಕಾಲುಗಳ ಕೆಳಗೆ ನಡುಗುತ್ತಿತ್ತು.

ಭವಿಷ್ಯ ಕೆಲವರು ನಿಮ್ಮಲ್ಲಿ ಓದುತ್ತಿರುವ ನೀವು ಅದೇ ಸ್ಥಳದಲ್ಲಿ ಇರಬಹುದು. ನಿಮ್ಮ ಪ್ರಪಂಚವು ಎಲ್ಲಿದೆ, ನಿಮ್ಮ ನಿರೀಕ್ಷೆಗಳು ಮತ್ತು ನಿಮ್ಮ ಭರವಸೆಯು ಅಲುಗಾಡುತ್ತಿದೆ. ನೀವು ಕೇಳುತ್ತಿರಬಹುದು. ನಾನು ಏನು ಹಿಡಿದಿಟ್ಟು ಕೊಳ್ಳಬಹುದೇ? ಒಂದು ವೇಳೆ ನೀವಾಗಿದ್ದರೆ, ನಿಮಗೆ ಗೊತ್ತಿರಲಿ. ನಿಮಗಾಗಿ ದೇವರಲ್ಲಿ ಒಂದು ವಿಶೇಷವಾದ ಸಂದೇಶವು ಇದೆ.

ಪ್ರಮುಖ ಬೋಧನೆಗಳು ಸಾಮಾನ್ಯವಾಗಿ ಅತ್ಯಂತ ಅನಿರೀಕ್ಷಿತ ಕ್ಷಣಗಳಲ್ಲಿ ಹೊರ ಹೊಮ್ಮುತ್ತವೆ. ವಿಶೇಷವಾಗಿ ಬಿಕ್ಕಟ್ಟಿನ ಋತುವಿನಲ್ಲಿ. ಅಂತಹ ಕ್ಷಣದಲ್ಲಿಯೇ ಯೇಸುಕ್ರಿಸ್ತನು ಈ ಮಾತುಗಳನ್ನು ತನ್ನ ಶಿಷ್ಯರೊಂದಿಗೆ ಮಾತನಾಡುತ್ತಾನೆ: ಫಲವನ್ನು ಕೊಡಲು. ಆದರೆ ಅಂತಹ ಸವಾಲಿನ ಸಮಯದಲ್ಲಿ ಯಾರಾದರೂ ಫಲಗಳನ್ನು ಹೇಗೆ ಉತ್ಪಾದಿಸ ಬಹುದು?

ಈ ಒಂದು ಲೇಖನವು ಎರಡು ಭಾಗಗಳನ್ನು ಪ್ರಸ್ತುತಪಡಿಸುತ್ತದೆ. ಈ ತಿಂಗಳಲ್ಲಿ, ಮೊದಲು ಭಾಗವಾದ ಯೋಹಾನ 15:16 ರಲ್ಲಿ ನಾವು ಗಮನವನ್ನು ಹರಿಸೋಣ. ಮುಂದಿನ ತಿಂಗಳು, ಶಾಶ್ವತವಾದ ಫಲವನ್ನು ಕೊಡುವ ಆ ಆಯ್ಕೆಯ ಹಿಂದಿನ ಉದ್ದೇಶವನ್ನು ನಾವು ಅನ್ವೇಷಿಸೋಣ.

## 1. ದೈವತ್ವದ ಚುನಾವಣೆ !

### ದೇವರ ಆಯ್ಕೆಯು 4 ಅಂಶಗಳನ್ನು ಹೊಂದಿದೆ!

### ಅ) ದೇವರು ಸಂಬಂಧವನ್ನು ಪ್ರಾರಂಭಿಸುತ್ತಾನೆ !

ಸಂಬಂಧವನ್ನು ದೇವರು ಮಾಡುವವನು ಎಂದು ದೇವರ ವಾಕ್ಯವು ನಿರಂತರವಾಗಿ ಪ್ರಕಟಿಸುತ್ತದೆ. ಆದರೆ ನಾನು ನಿನ್ನನ್ನು ಆರಿಸಿಕೊಂಡಿದ್ದೇನೆ ಎಂದು ಯೇಸುಕ್ರಿಸ್ತನು ಹೇಳಿದನು. ಆರಿಸುವಿಕೆಗೆ ಗ್ರೀಕ್ ಪದವು ಎಕ್‌ಲೆಗೋಮೈ ಇದರ ಅರ್ಥ ಆರಿಸುವಿಕೆ ಅಥವಾ ಒಬ್ಬರಿಂದ ಆರಿಸಿಕೊಳ್ಳುವುದು. ಎಫೆಸ 1:4 **ಅದೇ ಸತ್ಯವು ಕೇಳಿಸಲ್ಪಡುತ್ತದೆ. ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ಆರಿಸಿ ಕೊಂಡನು.**

ನಾವು ದೇವರನ್ನು ಕಂಡುಕೊಂಡಿದ್ದೇವೆ ಎಂದು ನಂಬುವ ನಮ್ಮ ಮಾನವ ಪ್ರವೃತ್ತಿಯನ್ನು ಇದು ಪ್ರಶ್ನಿಸುತ್ತದೆ. ವಾಸ್ತವವಾಗಿ, ಆತನು ನಮ್ಮೆಲ್ಲರನ್ನೂ ಹುಡುಕುತ್ತಾ ಇದ್ದಾನೆ. ಕಳೆದು ಹೋದ ಕುರಿಯ ಸಾಮ್ಯದ ಬಗ್ಗೆ ಗಮನವನ್ನು ಹರಿಸಿರಿ. ಕಳೆದು ಹೋದದ್ದನ್ನು ಹುಡುಕುವುದಕ್ಕಾಗಿ ಕುರುಬನು ಹೋಗುತ್ತಾನೆ. ಅದೇ ರೀತಿಯಾಗಿ, ನಮ್ಮ ಪ್ರೀತಿಯ ಒಳ್ಳೆಯ ಕುರುಬನು ನಿನ್ನನ್ನು ಮತ್ತು ನನ್ನನ್ನು ಹುಡುಕುತ್ತಾ ಇದ್ದಾನೆ. ನಮ್ಮನ್ನು ಹುಡುಕಿ ತಂದೆಯೊಂದಿಗೆ ಪುನಸ್ಥಾಪನೆ ಮಾಡುತ್ತಾನೆ.

ಈ ದೈವಿಕ ಆಯ್ಕೆಯು ಅನಿಯಂತ್ರಿತ ಅಥವಾ ತಾತ್ಕಲಿಕವಲ್ಲ. ಇದು ಉದ್ದೇಶಪೂರ್ವಕ ಮತ್ತು ಆಳವಾಗಿ ವೈಯಕ್ತಿಕವಾಗಿದೆ. ಪ್ರಪಂಚದ ಎಲ್ಲಾ ಜನರಲ್ಲಿ, ದೇವರು ನಿಮ್ಮನ್ನು ಆರಿಸಿಕೊಂಡನು. ಎಂತಹ ನಂಬಲಾಗದ ಸವಲತ್ತು.

ಈ ಒಂದು ಮೂಲಭೂತ ಸತ್ಯವನ್ನು ನಾವು ಜ್ಞಾಪಕದಲ್ಲಿ ಇಟ್ಟುಕೊಳ್ಳೋಣ. ನಮ್ಮ ಇರುವಿಕೆಯು ಉದ್ದೇಶಪೂರಕವಾಗಿದೆ. ನೀನು ಮತ್ತು ನಾನು ಉದ್ದೇಶಕ್ಕಾಗಿ ಸೃಷ್ಟಿಸಲ್ಪಟ್ಟಿದ್ದೇವೆ. ನಾವು ಸೃಷ್ಟಿಯ ಯಾವುದೇ ವಸ್ತುವಿನ ಉತ್ಪಾದನೆ ಅಲ್ಲ. ನಾವು ದೇವರಿಂದ ಆರಿಸಲ್ಪಟ್ಟಿದ್ದೇವೆ. ವಿನ್ಯಾಸದಿಂದ ರಚಿಸಲ್ಪಟ್ಟಿದ್ದೇವೆ.

### ಬ) ಅರ್ಹವಲ್ಲದ ಕೃಪೆ!

ದೇವರ ಆರಿಸುವಿಕೆಯು ನಮ್ಮ ಅರ್ಹತೆ ಮತ್ತು ಸಾಧನೆಗಳ ಮೇಲೆ ಆಧಾರವಾಗಿಲ್ಲ. ರೋಮ 9:11-12 ಎತ್ತಿ ಹೇಳುತ್ತದೆ. ಆತನು ಒಳ್ಳೆಯ ಅಥವಾ ಕೆಟ್ಟದ್ದನ್ನು ಮಾಡುವ ಮೊದಲು ಯಾಕೋಬ ಮತ್ತು ಏಸಾವುವಿನ ಆಯ್ಕೆಯನ್ನು ಮಾಡಿದ್ದಾನೆ. ನಾವು ಏನು ಮಾಡುತ್ತೇವೆ ಅಥವಾ ಮಾಡಲು ವಿಫಲವಾದರೂ ದೇವರ ಕೃಪೆಯನ್ನು ಗಳಿಸುವುದಿಲ್ಲ ಎಂದು ಇದು ಸ್ಪಷ್ಟವಾಗಿ ತೋರಿಸುತ್ತದೆ. ಆದರೆ ಮುಕ್ತವಾಗಿ ನೀಡಲಾಗುತ್ತದೆ. ಇದು ಕೃಪೆಯ ಗುಣವಾಗಿದೆ. ಅರ್ಹತೆಗೆ ಯೋಗ್ಯವಲ್ಲದ ಕೊಡುಗೆ. ಈ ಸತ್ಯವು ಕಾರ್ಯಕ್ಷಮತೆ ಆಧಾರಿತ ಧರ್ಮದಿಂದ ನಮ್ಮನ್ನು ಮುಕ್ತಗೊಳಿಸುತ್ತದೆ.

ಆದ್ದರಿಂದ, ನೀವು ಸತ್ಯವೇದ ಅಥವಾ ಪ್ರಾರ್ಥನೆಯನ್ನು ಸ್ಥಿರವಾಗಿ ಓದಿಲ್ಲದ ಕಾರಣ ನಿಮ್ಮಲ್ಲಿ ಯಾರಾದರೂ ನಿರುತ್ಸಾಹಗೊಂಡಿದ್ದರೆ, ನೀವು ಕಳೆದು ಹೋಗಿದ್ದೇವೆ ಎಂದು ಭಾವಿಸಬೇಡಿ. ನಮ್ಮ ಅರ್ಹತೆಯು ನಮ್ಮ ಕಾರ್ಯಗಳಿಂದ ಬರುವುದಿಲ್ಲ. ಆದರೆ ದೇವರ ಕೃಪೆಯಿಂದ!

ಏನೇ ಹಾಗಲಿ, ಪ್ರಾರ್ಥನೆಯಲ್ಲಿ, ಸತ್ಯವೇದವನ್ನು ಓದುವುದರಲ್ಲಿ ಮತ್ತು ಆತನೊಂದಿಗೆ ಸಮಯವನ್ನು ಕಳೆಯುವುದರಲ್ಲಿ

(6ನೇ ಪುಟಕ್ಕೆ)

GREAT COMMISSION PARTNERS

ECHO OF HIS CALL MINISTRIES
SINCE 1969

# ಪರಮಾದೇಶದಲ್ಲಿ ಪಾಲುಗಾರರು



**ಹಂಚುವುದು (ಗಲಾತ್ಯ. 6:2), ಪ್ರೋತ್ಸಾಹಿಸುವುದು (ರೋಮಾಪುರ. 12:13) ತ್ವರಿತಗೊಳಿಸುವುದು (II ತಿಮೋಥಿ. 1:6)**

## ಸ್ತುತಿ ಮತ್ತು ಪ್ರಾರ್ಥನಾ ಮನವಿಗಳು

**19 ಜುಲೈ 2025 ರಿಂದ 18 ಆಗಸ್ಟ್ 2025 ರ ವರೆಗೆ**

**(ಈ ಹಾಳೆಯನ್ನು ಹರಿದು ನಿಮ್ಮ ಸತ್ಯವೇದದೊಳಗಿಟ್ಟು ಇವುಗಳಿಗಾಗಿ ಪ್ರಾರ್ಥಿಸಿರಿ)**

### ಈ ವಿಷಯಗಳಿಗಾಗಿ ದೇವರಿಗೆ ಸ್ತೋತ್ರವನ್ನು ಸಲ್ಲಿಸಿರಿ.

ಜುಲೈ 19 : 2025-26ರ ಶೈಕ್ಷಣಿಕ ವರ್ಷಕ್ಕೆ **ನೆಹಮೀಯ ಸತ್ಯವೇದ ಕಾಲೇಜು** ಮತ್ತು **ಸಂತ ಪೌಲ್ ಮೆಟ್ರಿಕ್ಯುಲೇಷನ್ ಶಾಲೆ**ಗೆ ಹೊಸ ಪ್ರವೇಶಗಳ ಮೇಲೆ ಆತನ ಆಶೀರ್ವಾದ.

ಜುಲೈ 20 : ನಮ್ಮ ಸಹ ಸಂಪಾದಕರು ಮತ್ತು ಅವರ ಕುಟುಂಬಗಳ ಮೇಲೆ ಆತನ ಕಾಳಜಿಗಾಗಿ.

ಜುಲೈ 21 : ನಮ್ಮ ಸಭೆಗಳಲ್ಲಿ ಸಭಾಪಾಲಕರು ಮತ್ತು ಸ್ವಯಂಸೇವಕರು ಸೇವೆ ಮಾಡುತ್ತಾ ಇದ್ದಾರೆ ಅದಕ್ಕಾಗಿ ಕರ್ತನಿಗೆ ಸ್ತೋತ್ರವಾಗಲಿ.

ಜುಲೈ 22 : ನಮ್ಮ **ಗ್ಲೋಬಲ್ ವಿಷನ್ ಫಾರ್ ಯೂತ್ ಮತ್ತು ಕಿಂಡ್ಸ್ ಕೇರ್ ಸೇವೆ**ಯ ಮೇಲೆ ಆತನ ಆಶೀರ್ವಾದಗಳಿಗಾಗಿ.

ಜುಲೈ 23 : ನಮ್ಮ ಮುಖ್ಯ ಸಭೆಯಲ್ಲಿ ಹೊಸ ವಿಶ್ವಾಸಿಗಳನ್ನು ಸೇರಿಸಿದಕ್ಕಾಗಿ.

ಜುಲೈ 24 : ತಲುಪದೇ ಇರುವ ಸ್ಥಳಗಳಿಗೆ ಸುವಾರ್ತೆಯನ್ನು ಮುಟ್ಟಿಸುವಂತೆ ಶಕ್ತಿಕೊಟ್ಟಿದ್ದಕ್ಕಾಗಿ.

ಜುಲೈ 25 : ಸೇವಾಕ್ಷೇತ್ರಗಳಲ್ಲಿ ಕೆಲಸ ಮಾಡುವವರ ಅಚಲವಾದ ಸಮರ್ಪಣೆಗಾಗಿ.

ಜುಲೈ 26 : ಎಲ್ಲಾ ದೇಶಗಳ ಮೇಲೆ ಆತನ ಸಂರಕ್ಷಣೆಗಾಗಿ.

ಜುಲೈ 27 : ಹೊಸದಾಗಿ ರಕ್ಷಣೆ ಹೊಂದಿದವರನ್ನು ಅಭಿಷೇಕಿಸಿ ಮತ್ತು ನಮ್ಮ ಸಭೆಯ ಸಂಗತಿಗೆ ಕರೆದುಕೊಂಡು ಬಂದಿದ್ದಾನೆ.

ಜುಲೈ 28 : ರಾಜ್ಯ ಸಂಯೋಜಕರ ಐಕ್ಯತೆ ಮತ್ತು ನಾಯಕತ್ವ ಮತ್ತು ಅವರ ಸಂಗತಿಗಾಗಿ.

ಜುಲೈ 29 : ನಮ್ಮ ನಿಷ್ಠಾವಂತ ಬೆಂಬಲಿಗರು ತಮ್ಮ ನಿರಂತರ ಪ್ರಾರ್ಥನೆ ಮತ್ತು ಉದಾರ ಸಹಾಯಕ್ಕಾಗಿ.

ಜುಲೈ 30 : ನಮ್ಮ ಪ್ರಾರ್ಥನಾ ಸಹಭಾಗಿಗಳು, ಚಂದ ಸಹಭಾಗಿಗಳು, ನಂಬಿಕೆಯ ಸಹಭಾಗಿಗಳು, ಆಜೀವ ಸಹಭಾಗಿಗಳು, ದೊಡ್ಡ ಆಜ್ಞೆಯ ಸಹಭಾಗಿಗಳು ಮತ್ತು ಅವರ ಕುಟುಂಬಗಳ ಮೇಲೆ ಆತನ ದಯೆಗಾಗಿ.

ಜುಲೈ 31 : ನಮ್ಮ ಸುವಾರ್ತೆ ಮುದ್ರಣಾಲಯವು ನಿರಂತರವಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಅದರ ಸಮರ್ಥ ಕೆಲಸಗಾರರಿಗಾಗಿ.

ಆಗಸ್ಟ್ 01 : **ಸಂತ ಪೌಲ್ ಮೆಟ್ರಿಕ್ಯುಲೇಷನ್ ಶಾಲೆ (ಹಳ್ಳಿಯ ಶಾಲೆ)**ಗೆ ಹೊಸ ಸಮರ್ಪಣೆ ಮತ್ತು ಕೌಶಲ್ಯವುಳ್ಳ ಶಿಕ್ಷಕರನ್ನು ನೇಮಿಸಿದ್ದಕ್ಕಾಗಿ.

ಆಗಸ್ಟ್ 02 : ಪಾ. ಸ್ಯಾಮ್ ಸೆಲ್ವರಾಜ್ ಮತ್ತು ಅವರ ಕುಟುಂಬದ ಮೇಲೆ ಆತನ ಹೇರಳವಾದ ಆಶೀರ್ವಾದಕ್ಕಾಗಿ.

ಆಗಸ್ಟ್ 03 : 1969 ರಿಂದ ಪತ್ರಿಕಾ ಸೇವೆಯ ಮೇಲೆ ನಮ್ಮ ಸಮರ್ಪಣೆಗಾಗಿ ಆತನ ಆಶೀರ್ವಾದಕ್ಕಾಗಿ.

### ದಯಮಾಡಿ ಈ ವಿಷಯಗಳಿಗಾಗಿ ಪ್ರಾರ್ಥಿಸಿರಿ.

ಆಗಸ್ಟ್ 04 : ತಲುಪದೇ ಇರುವ ಸ್ಥಳಗಳಿಗೆ ಸುವಾರ್ತೆಯನ್ನು ತಲುಪಿಸುವಂತೆ ಆತನ ಕೃಪೆಗಾಗಿ.

ಆಗಸ್ಟ್ 05 : ಎಲ್ಲಾ ಧರ್ಮಗಳ ಮಧ್ಯದಲ್ಲಿ ಐಕ್ಯತೆ ಮತ್ತು ಸಹಬಾಳ್ವೆಗಾಗಿ.

ಆಗಸ್ಟ್ 06 : ಪ್ರಪಂಚದಾದ್ಯಂತಹ ಶಾಂತಿಯು ನೆಲೆಸುವಂತೆ.

ಆಗಸ್ಟ್ 07 : ಮಹಿಳೆ ಮತ್ತು ಮಕ್ಕಳ ಮೇಲೆ ಅತ್ಯಾಚಾರವು ಸಂಪೂರ್ಣವಾಗಿ ನಿರ್ಮೂಲನ ವಾಗುವಂತೆ.

ಆಗಸ್ಟ್ 08 : ನಮ್ಮ ಸಹಸಂಪಾದಕರು ಮತ್ತು ಅವರ ಕುಟುಂಬಗಳಲ್ಲಿ ಒಳ್ಳೆಯ ಆರೋಗ್ಯ ಭಾಗ್ಯಕ್ಕಾಗಿ.

ಆಗಸ್ಟ್ 09 : ಎಲ್ಲಾ ದೇಶಗಳಲ್ಲಿ ಪ್ರಾಮಾಣಿಕತೆ ಮತ್ತು ನೀತಿಯು ನೆಲೆಸುವಂತೆ.

ಆಗಸ್ಟ್ 10 : ಆತನ **ಕರೆಯ ಸೇವೆಯು** ಈ ಹೊತ್ತಿಗೆ 57ನೇಯ ವರ್ಷಕ್ಕೆ ಪ್ರವೇಶ ಮಾಡುತ್ತದೆ. ದೇವರ ನಿರಂತರವಾದ ನಡೆಸುವಿಕೆಗಾಗಿ.

ಆಗಸ್ಟ್ 11 : ನಮ್ಮ ಹಿರಿಯ ಸಭಾಪಾಲಕರಾದ ಸ್ಯಾಮ್ ಸೆಲ್‌ರಾಜ್‌ರವರ ಯೋಜನೆಗಳ ಮೇಲೆ ದೇವರ ಆಶೀರ್ವಾದಕ್ಕಾಗಿ.

ಆಗಸ್ಟ್ 12 : ಯೋಜನೆ ಮತ್ತು ಅಭಿವೃದ್ಧಿಯ ಪ್ರತಿಯೊಂದು ಕ್ಷೇತ್ರದ ಎಲ್ಲಾ ರಾಷ್ಟ್ರಗಳಲ್ಲಿ ಏಕತೆ ಮತ್ತು ಸಮಗ್ರ ಪ್ರಗತಿಗಾಗಿ.

ಆಗಸ್ಟ್ 13 : ಪ್ರಪಂಚದ ಎಲ್ಲಾ ಜನಾಂಗಗಳ ಅಗತ್ಯತೆಗಳಿಗಾಗಿ.

ಆಗಸ್ಟ್ 14 : ಜಾಗತಿಕ ಆರ್ಥಿಕ ಹಿಂಜರಿತದ ಅಂತ್ಯಕ್ಕಾಗಿ.

ಆಗಸ್ಟ್ 15 : **ರಜಾಕಾಲದ ಸತ್ಯವೇದ ಸಮಯ**ದಲ್ಲಿ ಯೇಸುಕ್ರಿಸ್ತನ ಪ್ರೀತಿಯಿಂದ ಮಕ್ಕಳು ಸ್ಪರ್ಶಿಸಲ್ಪಟ್ಟವರು ಕರ್ತನಲ್ಲಿ ಬೆಳೆಯಲು ಮತ್ತು ಸಭೆಗೆ ನಿಷ್ಠೆಯಿಂದ ಹಾಜರಿಯಾಗುವಂತೆ.

ಆಗಸ್ಟ್ 16 : ಮಿಶನರಿಗಳ ಮತ್ತು ದೇವರ ಸೇವಕರುಗಳು ವಿರೋಧವಾಗಿ ನಡೆಯುವ ಹಿಂಸೆ ಕೊನೆಗೊಳ್ಳುವಂತೆ.

ಆಗಸ್ಟ್ 17 : ಕುಟುಂಬಗಳನ್ನು ವಿಭಜಿಸುವ ಗುರಿಯನ್ನು ಹೊಂದಿರುವ ಸೈತಾನನ ಕೃತಿಗಳ ನಾಶನಕ್ಕಾಗಿ.

ಆಗಸ್ಟ್ 18 : ದೇವರ ಮಕ್ಕಳ ಮೇಲೆ ಆತ್ಮೀಕ ಮತ್ತು ಭೌತಿಕ ಆಶೀರ್ವಾದ ಗಳಿಗಾಗಿ.

(4ನೇ ಪುಟದಿಂದ)

ತೊಡಗಿಸಿಕೊಳ್ಳುವುದರಲ್ಲಿ ನಮ್ಮ ಸಂಬಂಧವು ಆತನೊಂದಿಗೆ ಬೆಳೆಯುವುದರಲ್ಲಿ ನಮಗೆ ಸಹಾಯ ಮಾಡುತ್ತದೆ. ಆತನ ಚಿತ್ತವನ್ನು ಅರ್ಥ ಮಾಡಿಕೊಳ್ಳುವುದು. ಆತನನ್ನು ಸಂತೋಷಪಡಿಸುವ ಜೀವಿತವನ್ನು ಜೀವಿಸುವುದು. ಕರ್ತನೊಂದಿಗಿನ ನಮ್ಮ ಪಯಣವು ಪೆಟ್ಟಿಗೆಗಳನ್ನು ಪರಿಶೀಲಿಸುವುದು ಅಥವಾ ಕಾರ್ಯಕ್ಷಮತೆಯ ಗುರಿಗಳನ್ನು ಪೂರೈಸುವ ಬಗ್ಗೆ ಅಲ್ಲ. ಇದು ನಂಬಿಕೆಯಿಂದ ಬದುಕುವುದು ಆತನ ಅರ್ಹತೆಯಿಲ್ಲದ ಕೃಪೆಯ ನಂಬಿಕೆ.

ಇದಕ್ಕಾಗಿ ಯೇಸುಕ್ರಿಸ್ತನು ಈ ಲೋಕಕ್ಕೆ ಬಂದನು. ಆತನು ಶಿಲುಬೆಯಲ್ಲಿ ಸತ್ತನು, ಹೂಣಲ್ಪಟ್ಟನು ಮತ್ತು ಮೂರನೇಯ ದಿನದಲ್ಲಿ ಸತ್ತವರೊಳಗಿಂದ ಎದ್ದು ಬಂದನು. ಆತನು ಅದ್ಭುತ, ಸರ್ವಶಕ್ತನಾದ ದೇವರು. ನಾವು ಯಾರೆಂಬುದರ ಕಾರಣದಿಂದಲ್ಲ. ಆತನು ಯಾರೆಂಬುದರ ಕಾರಣದಿಂದಾಗಿ!

## ಸಿ) ಪ್ರೀತಿಯಲ್ಲಿ ಆರಿಸುವಿಕೆ!

ಮೂರನೆಯದಾಗಿ, ದೇವರ ಆಯ್ಕೆಯ ಹಿಂದಿನ ಪ್ರೇರಣೆಯು ಪ್ರೀತಿ. ಧರ್ಮೋಪದೇಶ ಕಾಂಡ 7:7-8 ಪ್ರಕಟಿಸುತ್ತದೆ. **ನಿಮ್ಮನ್ನು ಎಲ್ಲಾ ಜನಾಂಗಗಳಲ್ಲಿ ಹೆಚ್ಚು ಮಂದಿ ಎಂದು ಇಷ್ಟಪಟ್ಟು ಆದುಕೊಳ್ಳಲಿಲ್ಲ, ನೀವು ಎಲ್ಲಾ ಜನಾಂಗ ಗಳಿಗಿಂತಲೂ ಸ್ವಲ್ಪ ಮಂದಿಯಷ್ಟೆ.** ಆತನ ಚುನಾವಣೆಯು ಆತನ ಪ್ರೀತಿಯ ಸ್ವಭಾವದಿಂದ ಉಂಟಾಗುತ್ತದೆ. ಆದರೆ ನಮ್ಮ ಯೋಗ್ಯತೆಯಿಂದ ಇಲ್ಲ.

ದೇವರು ನಮ್ಮನ್ನು ಪ್ರೀತಿಸುತ್ತಾನೆ- ಹಿಂದಿನದನ್ನು ಲೆಕ್ಕಿಸದೆ. ದೇವರ ಪ್ರೀತಿಯಿಂದ ನಮ್ಮನ್ನು ಅಗಲಿಸಲಿಕ್ಕೆ ಯಾರಿಗೂ ಸಾಧ್ಯವಿಲ್ಲ. ಇನ್ನೂ ನೀವು ಆತನ ಪ್ರೀತಿಯನ್ನು ಅನುಭವಿಸದೇ ಇದ್ದರೆ ಅಥವಾ ಅನುಭವಿಸಿದ್ದರೆ ಆದರೆ ಆತನ ಶಿಲುಬೆಯನ್ನು ಹೊತ್ತುಕೊಳ್ಳಲು ನಾಚಿಕೆಪಟ್ಟರೆ ಈ ಸಂದೇಶವು ನಿಮಗಾಗಿ. ದೇವರು ಯಾರ ಮೂಲಕವಾದರೂ ಕಾರ್ಯವನ್ನು ಮಾಡುತ್ತಾನೆ. ನೀವು ಎಷ್ಟೇ ಚಿಕ್ಕವರಾಗಿದ್ದರೂ ಅಥವಾ ಅತ್ಯಲ್ಪವಾಗಿರುವ ಗುಂಪು ತೋರುತ್ತದೆ. ಅವರು ಆತನನ್ನು ಪ್ರೀತಿಸುತ್ತಾರೆ ಎಂಬುದು ಮುಖ್ಯವಾದದ್ದು.

## ಡಿ) ವೈಯಕ್ತಿಕ ಆರಿಸುವಿಕೆ!

ದೇವರ ಆರಿಸುವಿಕೆಯು ಆಳವಾಗಿ ವ್ಯಕ್ತಿಗತವಾಗಿದೆ. ಯೆಶಾಯ 43:1 ಹೇಳುತ್ತದೆ. **ನಿನ್ನ ಹೆಸರು ಹಿಡಿದು ಕರೆದೆನಲ್ಲಾ, ನೀನು ನನ್ನವನೇ.** ಯೇಸುಕ್ರಿಸ್ತನು ವ್ಯಕ್ತಿಗತವಾಗಿ ಪ್ರತಿಯೊಂದು ತನ್ನ ಶಿಷ್ಯರನ್ನು ಆರಿಸಿಕೊಂಡನು. ಅವರ ವ್ಯಕ್ತಿತ್ವ, ಬಲಗಳು ಮತ್ತು ಬಲಹೀನತೆಗಳನ್ನು ಆತನು ಅರಿತುಕೊಂಡಿದ್ದನು.

ದೇವರ ಕರೆಯು ವೈಯಕ್ತಿಕ ಅಂಶವು. ಆರಾಮ ಮತ್ತು ಮಹತ್ವ ಎರಡನ್ನು ತರುತ್ತದೆ. ನಾವು ಸುಮ್ಮನೆ ಆರಿಸಲ್ಪಟ್ಟೆವು. ನಾವು ವ್ಯಕ್ತಿಗತವಾಗಿ ಆರಿಸಲ್ಪಟ್ಟಿದ್ದೇವೆ ಗೊತ್ತು, ದೇವರಿಂದ ಪ್ರೀತಿಸಲ್ಪಟ್ಟಿದ್ದೇವೆ.

ನನ್ನ ಹಿಂದೆ ಹೇಳಿರಿ :

ನಾನು ಸುಮ್ಮನೆ ಆರಿಸಲ್ಪಟ್ಟಿಲ್ಲ. ನಾನು ದೇವರ ವಿಶೇಷವಾದ ಆರಿಸುವಿಕೆ. ಎರಡನೆಯದು ಅಲ್ಲ. ಆದರೆ ಅತ್ಯುತ್ತಮವಾದದ್ದು.

1 ಪೇತ್ರ 2:9 ರಲ್ಲಿ ಓದುತ್ತೇವೆ :

**ನೀವಾದರೋ ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರ ಮಾಡುವವರಾಗುವಂತೆ ದೇವರಾದುಕೊಂಡ ಜನಾಂಗವು ರಾಜವಂಶಸ್ಥರಾದ ಯಾಜಕರು ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ.**

ನಾವು ಆತನ ಆಯ್ಕೆಯ ಪೀಳಿಗೆಯವರು ಎಂದು ದೇವರು ದೃಢೀಕರಿಸಿದ್ದಾನೆ. ಜ್ಞಾಪಕ ವಿಟ್ಟುಕೊಳ್ಳಿ. ನಾವು ಕೇವಲ ಆಯ್ಕೆಯಾಗಿಲ್ಲ. ನಾವು ದೇವರ ವೈಯಕ್ತಿಕ ಮತ್ತು ಉದ್ದೇಶಪೂರಕವಾದ ಆರಿಸುವಿಕೆ.


ನಾವು ಮಾರುಕಟ್ಟೆಯ ಒಂದು ತರಕಾರಿ ಅಂಗಡಿಯಲ್ಲಿ ಎಲ್ಲವನ್ನೂ ಸುಮ್ಮನೆ ತೆಗೆದು ಕೊಳ್ಳುವುದಿಲ್ಲ. ಯಾವುದು ಅತ್ಯುತ್ತಮ ಮತ್ತು ನಮಗೆ ಇಷ್ಟವಾದದ್ದನ್ನು ತೆಗೆದುಕೊಳ್ಳುತ್ತೇವೆ. ಅದೇ ಪ್ರಕಾರ, ದೇವರು ನಮ್ಮನ್ನು ಉದ್ದೇಶ ಪೂರ್ವಕವಾಗಿ ಮತ್ತು ಪ್ರೀತಿಯಿಂದ ನಮ್ಮನ್ನು ಆರಿಸಿಕೊಂಡಿದ್ದಾನೆ - ಆತನಿಗಾಗಿ. ರಾಜಧಿ ರಾಜನು. ಸೃಷ್ಟಿಯ ಕರ್ತನನ್ನು ಗೊತ್ತು ಮಾಡಿಕೊಳ್ಳುವುದು ಇದು ಊಹಿಸಲಾಗದ ಸೌಭಾಗ್ಯವಾಗಿದೆ. ಆತನು ಆಯ್ಕೆ ಮಾಡಿದ ಪೀಳಿಗೆಯ ಭಾಗವಾಗಿ ನನ್ನನ್ನು ಆಯ್ಕೆ ಮಾಡಿದ್ದಾನೆ!

## 2. ಆರಿಸುವಿಕೆಯ ದೇವರ ವಿಧಾನ!

ದೇವರ ವಾಕ್ಯದ ಉದ್ದಕ್ಕೂ, ದೇವರು ಆಯ್ಕೆ ಮಾಡುವುದರಲ್ಲಿ ಸ್ಥಿರವಾದ ಮಾದರಿಯನ್ನು ನಾವು ನೋಡುತ್ತೇವೆ. ಆತನು ಆಗಾಗ್ಗೆ ಅಸಂಭವ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತಾನೆ. ಆತನ ಆಯ್ಕೆಗಳು ಅನಿರೀಕ್ಷಿತ, ನಿರ್ಭಯ ಮತ್ತು ಷರತ್ತು ಇಲ್ಲದಾಗಿದೆ.

## ಅ) ಅಬ್ರಹಾಮ

ಆದಿಕಾಂಡ 12:1-3ರಲ್ಲಿ ದೇವರು ಅಬ್ರಹಾಮನನ್ನು ಕಲ್ದಿಯರ ಊರು ಎಂಬ ಪಟ್ಟಣವನ್ನು ಬಿಟ್ಟು ಆತನ ತೋರಿಸುವ ಗೊತ್ತಿಲ್ಲದ ದೇಶಕ್ಕೆ ಬರಬೇಕೆಂದು ಕರೆದನು.



*ಅಬ್ರಹಾಮನು ತನ್ನ ಹೆಂಡತಿಯ ವಿಷಯದಲ್ಲಿ ಸುಳ್ಳು ಹೇಳಿದನು.*

(8 ನೇ ಪುಟಕ್ಕೆ)

NEHEMIAH BIBLE COLLEGES,
Qualification : 10th Standard & above
Chepauk & Santhoshapuram, Velachery Chennai.
Rush for admission! Medium : Tamil (Part Time)
Hindi (Residential) (Sponsorship Available)
Diploma in Theology
Recognised by International Christian Leaders & Senior Pastors for the past 55 years
Contact : The Chairman, Nehemiah Bible College.
10, MOHAMMED ABDULLAH 2ND STREET, CHEPAUK, CHENNAI - 600 005, INDIA.
Phone : (+91-44) 2852 8282, Cell : (+91) 98410 71852 / 95661 31858
E.mail : sam@echoofhiscall.org / Website : www.echoofhiscall.org

## MAIN CHURCH PROGRAMMES

1. Prayer Service : 24 hours
2. **ECHO OF HIS CALL** - Monthly Magazines :English, Tamil, Malayalam, Telugu, Hindi, Kannada, Marathi, Gujarati, Bengali, Odiya, Nepali, Assamese, Punjabi, Urdu, Sinhala & Afrikan.
3. **BIBLECOR -** Basic Bible Courses (English, Tamil & Hindi)
4. Theological Correspondence Courses: English & Tamil
5. Nehemiah Bible Colleges (Chepauk, Santhoshapuram & Velachery)
6. Great Commission Partners (Network of Pastors)
7. Training Programmes – Seminars & Retreats
8. Crusades
9. Literature Distribution and Follow Up
10. Gospel Printing Press - Publications
11. St. Paul's Matriculation School - Village English High School
12. Sunday Schools (Chepauk) : 10.30 a.m. Sunday & (Velachery, Balaji Nagar & Santhoshapuram) 3.00 p.m. Sunday
13. **Early Morning Service : 5.30 a.m. Sunday**
14. **Preliminary Service : 8.00 a.m. Sunday**
15. **Tamil Service : 8.30 a.m. Sunday**
16. **Youth Meeting : 11.00 a.m. Sunday**
17. **Fellowship Lunch : 1.00 p.m. Sunday**
18. **Telugu Service : 4.00 p.m. Sunday**
19. **Hindi Service : 5.00 p.m. Sunday**
20. **Tamil & English Service : 6.00 p.m. Sunday**
21. Feedback Time : 7.30 p.m. Sunday
22. Women's Prayer : 5.30 p.m. Wednesday
23. Men's Prayer : 7.30 p.m. Friday
24. Discipleship Meeting : 6.00 p.m. Saturday
25. House Meetings : 6.30 p.m. Tuesday & Thursday
26. Special Holy Communion : 6.00 a.m. 1st day of each month
27. Ministers' Meeting : 6.00 p.m. First Saturday
28. Parents' Prayer : 4.00 p.m. First Sunday
29. Night Prayer : 9.30 p.m. Third Friday
30. Fasting Prayer : 9:30 a.m. Second Saturday
31. Holy Communion : Second Sunday Services
32. Youth / Kid Prayer : 10.00 p.m. daily (over phone)
33. Staff Devotion : 9.00 a.m. daily
34. Office : 9.00 a.m. to 9.00 p.m. (except Sundays)

## Echo of His Call Postal Courses for candidates in India

### 1. BIBLECOR

We offer Postal Course on Basic Truths of The Bible to new Christians and non-Christians in English – 57 pages, Hindi – 76 pages & Tamil – 96 pages. You will get a Course Book entitled **New Life – For You!** **After the completion of this course, you will get a certificate. There will be no compulsory fees. You will be blessed!** - Editor

### 2. THEOLOGICAL CORRESPONDENCE COURSE

Advanced Distance Education called **Theological Correspondence Course** is available in English – 537 pages and Tamil – 652 pages for Pastors, Evangelists, Christian Leaders and for lay people who have passion to do God's Ministry! A fee of Rs. 1000/- is charged. 7 Books with 149 Chapters are supplied. **Certificate in Ministry** will be awarded. **God will bless you!**

*For more details, write to us.*

**The Chairman, Nehemiah Bible College,**
**Echo of His Call, Post Box 2957**
CHEPAUK, CHENNAI - 600 005.

**Ph.: (044) 2852 8282, 2852 9293, 2854 7766,**
**Cell : 98410 71852, 95661 31858**
**E.mail : biblecor@yahoo.co.in**

## A good opportunity to get Echo of His Call monthly magazine at free of cost

If you could send the addresses of your friends / relatives through post, letter, e.mail, WhatsApp or phone to us, we will dispatch **Echo of His Call** monthly magazine to them at free of cost.

## TAX EXEMPTION

Donations by any individual or organization from India to **Echo of His Call Educational Trust** are eligible for Income Tax exemption under Section 80G of the Income Tax Act. Official receipts will be issued for this purpose. Please make your Demand Drafts / Cheques / M.O. for such donations in favour of **Echo of His Call Educational Trust** and send to us, along with your Aadhar Number and PAN for getting Income Tax Exemption.

| | | |
|---|---|---|
| **Account Name** | : | **ECHO OF HIS CALL EDUCATIONAL TRUST** |
| **Account Number** | : | **1023 2923 805** |
| **Bank Name** | : | **STATE BANK OF INDIA** |
| **Branch** | : | **TRIPLICANE, CHENNAI - 600 005** |
| **IFSC Code** | : | **SBIN 0000249** |
| **SWIFT Code** | : | **SBI NIN BB 455** |



# ಹಳ್ಳದಿಂದ ಅರಮನೆಗೆ

# PIT TO PALACE

(ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರ ಜೀವನದ ಅನುಭವಗಳು)

"ಯಾರು ಓದುತ್ತಾರೋ ಅವರಿಗೆ ಅರ್ಥವಾಗಲಿ." (ಮತ್ತಾಯ 24:15)

## ಅದ್ಭುತ ದೇವರ ಕೈಯಲ್ಲಿ ಅದ್ಭುತ ಸೇವೆಗಳು !

ನಾವು ಸುವಾರ್ತೆಯ ವಿವಿಧ ಸೇವೆಗಳ ಜೀವನದ ಇತಿಹಾಸವನ್ನು ಹಿಂತಿರುಗಿ ನೋಡುವಾಗ, ನಮ್ಮ ತಂದೆಯಾದ ದೇವರು ಎಲ್ಲಾ ಸಂದರ್ಭಗಲ್ಲಿಯೂ ತನ್ನ ಸೇವಕನ ಎಲ್ಲಾ ಅಗತ್ಯತೆಗಳನ್ನು ನೋಡಿಕೊಳ್ಳುವಲ್ಲಿ ಮತ್ತು ಪೂರೈಸುವಲ್ಲಿ ನಂಬಿಗಸ್ಥನಾಗಿದ್ದಾನೆ. ಆತನ ಎಲ್ಲಾ ಸೇವಕರು ಅಗತ್ಯವಿಲ್ಲದೆ ಇರಬಹುದು. ಆದರೆ ಅವರನ್ನು ಯಶಸ್ವಿಗೊಳಿಸುವಲ್ಲಿ ಆತನು ನಂಬಿಗಸ್ಥನಾಗಿದ್ದಾನೆ. ಅವರನ್ನು ಅನಾಥರನ್ನಾಗಿ ಬಿಡುವುದಿಲ್ಲ.

1982ರಲ್ಲಿ, ಮದ್ರಾಸ್ ಹತ್ತಿರದ ಒಂದು ಚಿಕ್ಕ ಹಳ್ಳಿಯಲ್ಲಿ ಸುವಾರ್ತೆಯನ್ನು ಸಾರುವುದಕ್ಕೆ ನನಗೆ ಆಹ್ವಾನವಿತ್ತು. ಕಾರ್ಯಕ್ರಮವು ಇಡೀ ದಿನದಾಗಿತ್ತು. ನಾನು ಅಲ್ಲಿಗೆ ಹೋಗುವುದಕ್ಕೆ ರೈಲನ್ನು ಇಡಿಯಬೇಕಾಗಿತ್ತು. ನನ್ನ ಸಹೋದ್ಯೋಗಿಗಳಲ್ಲಿ ಕೆಲವರು ಹಿಂದಿನ ದಿನ ಪ್ರಾಥಮಿಕ ವ್ಯವಸ್ಥೆಗಳನ್ನು ನಿರ್ವಹಿಸಲು ಅಲ್ಲಿಗೆ ಹೋದರು. ಒಂದು ಪ್ರತ್ಯೇಕ ದಿನ ಮುಂಜಾನೆಯಲ್ಲಿ ನಾನು ಕಾರ್ಯಕ್ರಮಕ್ಕಾಗಿ ನನ್ನನ್ನು ಸಿದ್ಧಪಡಿಸಿಕೊಂಡೆನು ಮತ್ತು ಹೆಚ್ಚಿನ ಪ್ರಾರ್ಥನೆಯ ನಂತರ ರೈಲ್ವೆ ನಿಲ್ದಾಣಕ್ಕೆ ಹೋದೆ. ಆದರೆ ಪ್ರಾಮಾಣಿಕ ಪ್ರಯತ್ನಗಳ ಹೊರತಾಗಿಯೂ ನನ್ನ ಪಯಣಕ್ಕೆ ಅಗತ್ಯವಾದ ಹಣವನ್ನು ವ್ಯವಸ್ಥೆಗೊಳಿಸಲು ನನಗೆ ಸಾಧ್ಯವಾಗಲಿಲ್ಲ. ರೈಲು ಟಿಕೆಟ್ ಇತ್ಯಾದಿಗಳನ್ನು ಪಡೆಯಲು ನನ್ನ ಕೈಚೀಲದಲ್ಲಿ ಹಣವಿರಲಿಲ್ಲ.

ನಾನು ರೈಲ್ವೆ ನಿಲ್ದಾಣಕ್ಕೆ ಬಂದಾಗ, ನಿರ್ದಿಷ್ಟ ರೈಲು ಹಿಡಿಯಲು ಟಿಕೆಟ್ ಖರೀದಿಸಲು ದೀರ್ಘ ಸಾಲು ಇದೆ ಎಂದು ನಾನು ಕಂಡುಕೊಂಡೆ. ಹಳ್ಳಿಯಲ್ಲಿನ ಕಾರ್ಯಕ್ರಮಕ್ಕೆ ನನ್ನ ಉಪಸ್ಥಿತಿಯು ತುಂಬಾ ಅಗತ್ಯವಾಗಿತ್ತು. ನಾನು ಅಲ್ಲಿಗೆ ಹೋಗುವುದನ್ನು ಬಿಟ್ಟು ಬೇರೆ ಯಾವುದೇ ಪರ್ಯಾಯವನ್ನು ಕಂಡುಕೊಳ್ಳಲಿಲ್ಲ. ಆದ್ದರಿಂದ ನಾನು ಸಾಲಿನಲ್ಲಿ ನಿಂತುಕೊಂಡೆನು. ನನ್ನ ಕೈಚೀಲದಲ್ಲಿ ಇತರರಂತೆಯೇ ಸಾಕಷ್ಟು ಹಣವನ್ನು ನಾನು ಹೊಂದಿದ್ದೇನೆಂದು, ನಾನು ರೈಲ್ವೆ ಟಿಕೆಟ್ ಪಡೆಯಲು. ನನ್ನ ಆತ್ಮದಲ್ಲಿ, ಅದ್ಭುತಕ್ಕಾಗಿ ದೇವರನ್ನು ನಂಬಿದೆನು.

ಸಾಲು ಸಾಲು ಮುಂದೆ ಮುಂದೆ ಸ್ವಲ್ಪ ಹೋಗುತ್ತಿತ್ತು. ನನ್ನ ಮುಂದೆ ನಿಂತುಕೊಂಡಿದ್ದ ಜನರು ಬಹಳ ಚುರುಕಾಗಿ ತಮ್ಮ ಕೈಚೀಲವನ್ನು ತೆರೆಯುತ್ತಿದ್ದರು. ಟಿಕೆಟ್‌ನ್ನು ತೆಗೆದುಕೊಂಡು ಚಿಲ್ಲರೆಯನ್ನು ತೆಗೆದುಕೊಳ್ಳುತ್ತಿದ್ದರು. ಆದರೆ, ನಾನು ದೇವರ ಸಾಮಾನ್ಯ ಸೇವಕನಾಗಿದ್ದೆನು. ನನ್ನ ಕೈಚೀಲವು ಖಾಲಿಯಾಗಿದೆ. ನನ್ನ ಸರದಿ ಹಣ ಪಾವತಿಸಲು ಮತ್ತು ಟಿಕೆಟ್ ಪಡೆಯಲು ಬಂದಾಗ ನಾನು ಏನು ಮಾಡಬೇಕೆಂಬುದು ತಿಳಿಯಲಿಲ್ಲ. ನನ್ನ ಹೃದಯದ ಬಡಿತವು ಬಹಳ ವೇಗವಾಗಿ ಚಲಿಸುತ್ತಿತ್ತು.

ಅಂತಿಮವಾಗಿ ಹಣವನ್ನು ಕೊಟ್ಟು ಟಿಕೆಟ್‌ನ್ನು ತೆಗೆದುಕೊಳ್ಳುವುದಕ್ಕೆ ನನ್ನ ಸರದಿಯು ಬಂತು. ನನಗೆ ಗೊತ್ತಾಗಲಿಲ್ಲ ಏನು ಮಾಡಬೇಕೆಂದು. ಟಿಕೆಟ್ ಕೌಂಟರ್‌ನಲ್ಲಿರುವ ಮನುಷ್ಯನು ನೀವು ಎಲ್ಲಿಗೆ ಹೋಗಬೇಕೆಂದು ಕೇಳಿದರು? ನನ್ನ ಬಾಯಿಯನ್ನು ತೆಗದು ಈ ರೀತಿಯಾಗಿ ಹೇಳುವದಕ್ಕೆ ಪ್ರಾರಂಭಿಸಿದೆನು. ನಾನು ಅಲ್ಲಿಗೆ ಹೋಗಬೇಕು?... ತಕ್ಷಣವೇ ನನ್ನ ಹಿಂದೆ ಒಂದು ಸ್ವರವನ್ನು ಕೇಳಿಸಿಕೊಂಡೆನು. ಕೌಂಟರ್‌ನ ಕ್ಲರ್ಕ್ ಕೇಳಿಕೊಂಡನು, ಸ್ವಾಮಿ ಆ ಮನುಷ್ಯನಿಂದ ಹಣವನ್ನು ತೆಗೆದುಕೊಳ್ಳಬೇಡಿ. ನಾನು ಕೂಡ ಅವರೊಂದಿಗೆ ಪ್ರಯಾಣವನ್ನು ಮಾಡುತ್ತೇನೆ. ಆತನ ಟಿಕೆಟ್‌ನ ಹಣವನ್ನು ನಾನು ಕೊಡುತ್ತೇನೆ. ಅವರಿಂದ ಹಣವನ್ನು ತೆಗೆದುಕೊಳ್ಳಬೇಡಿ. ಕೌಂಟರ್‌ನಲ್ಲಿರುವ ಗುಮಾಸ್ತನು ಇತರ ವ್ಯಕ್ತಿಯು ತನ್ನ ಸ್ನೇಹಿತನಾಗಿದ್ದರಿಂದ ಹಣವನ್ನು ಪಾವತಿಸದಂತೆ ವಿನಂತಿಸಿದನು!

ನನ್ನ ಹೃದಯವು ಒಡೆದು ಚಿದ್ರವಾಯಿತು. ನನ್ನನ್ನು ನಾನು ತಡೆದು ಕೊಳ್ಳಲಾಗಲಿಲ್ಲ. ನಾನು ಆ ಸ್ಥಳವನ್ನು ತೊರೆದು ಮಗುವಿನಂತೆ ಅಳುತ್ತಿದ್ದೆ. ನನ್ನ ಯಜಮಾನನ ಕಾಳಜಿಯನ್ನು ತನ್ನ ಪುಟ್ಟ ಸೇವಕನ ಕಡೆಗೆ ಅರಿತುಕೊಂಡೆ. ನಾನು ಸೇವೆ ಮಾಡುತ್ತಿದ್ದೆನು. ನಂತರ ಆ ಸಹೋದರನು ನನ್ನ ಟಿಕೆಟ್‌ಗೆ ಪಾವತಿಸಿದನು ಮತ್ತು ಟಿಕೆಟ್ ಪಡೆದನು. ನಾವು ಜೊತೆಯಲ್ಲಿ ಪ್ರಯಾಣವನ್ನು ಮಾಡಿದೆವು. ನನ್ನ ಸಂಕಟವನ್ನು ಹಂಚಿಕೊಂಡೆನು ಮತ್ತು ಆ ದಿನದಲ್ಲಿ ಕರ್ತನ ಮಧ್ಯವರ್ತಿಕೆಯನ್ನು ಆತನು ಕಣ್ಣೀರು ಸುರಿಸಿ ಕರ್ತನಿಗೆ ಧನ್ಯವಾದಗಳನ್ನು ಸಲ್ಲಿಸಿದನು. ಈ ದಿನದ ಕಾರ್ಯಕ್ರಮವನ್ನು ಕರ್ತನು ಹೇರಳವಾಗಿ ಆಶೀರ್ವದಿಸಿದನು!

ಪ್ರಿಯ ಓದುಗರೇ, ಕರ್ತನಾದ ಯೇಸುಕ್ರಿಸ್ತನು ನಿಮ್ಮ ಅಗತ್ಯತೆಗಳಿಗೆ ಆತನು ಸಂತೃಪ್ತಿಯಾಗಿದ್ದಾನೆ. ಕರ್ತನು ತನ್ನ ಸೇವೆಗೆ ನಿಮ್ಮನ್ನು ಕರೆಯುವುದಾದರೆ, ನಾಚಿಕೆ ಪಡಬೇಡಿರಿ ಮತ್ತು ತಡ ಮಾಡಬೇಡಿರಿ.

**ಆತನು ನಿಮ್ಮನ್ನು ಅನಾಥರನ್ನಾಗಿ ಬಿಡುವುದಿಲ್ಲ...** ಯೋಹಾನ 14:18

*************

(6ನೇ ಪುಟದಿಂದ)

ನಂಬಿಕೆಯ ಪಯಣ. ಸಂತತಿಯಿಲ್ಲದ 75 ವರ್ಷದ ಅಬ್ರಹಾಮನು, ಆದರೂ ದೇವರು ಅವನನ್ನು ಅನೇಕ ರಾಷ್ಟ್ರಗಳ ಪಿತನನ್ನಾಗಿ ಮಾಡುವ ವಾಗ್ದಾನವನ್ನು ನೀಡಿದನು. ಅವನು ತಪ್ಪಿಲ್ಲದವ ನಾಗಿದ್ದಾನಾ? ಖಂಡಿತವಾಗಿ ಇಲ್ಲ. ಅವನ ಹೆಂಡತಿಯಾದ ಸರಳ ವಿಷಯದಲ್ಲಿ ಸುಳ್ಳು ಹೇಳಿದನು. ಅರಸನಾದ ಅಬಿಮಲೇಕಿನಿಂದ ತನ್ನನ್ನು ರಕ್ಷಿಸಿಕೊಳ್ಳಲು ಅವಳನ್ನು ತಂಗಿ ಎಂದು ಕರೆದನು (ಆದಿಕಾಂಡ 20). ಆತನು ಹಾಗರಳನ್ನು ತೆಗೆದುಕೊಂಡನು ಮತ್ತು ನಂತರ ಆಕೆಯನ್ನು ಮತ್ತು ಮಗನನ್ನು ತಿರಸ್ಕರಿಸಿದನು. ಅದಾಗ್ಯೂ ದೇವರು ತನ್ನ ಆರಿಸುವಿಕೆಯಲ್ಲಿ ನಂಬಿಗಸ್ಥನಾಗಿದ್ದನು. ದೇವರು ನಂಬಿಗಸ್ಥನಾಗಿರುವನು-ನೀನು ಯಾರೇ ಆಗಿರಲಿ!

### ಬ) ಮೋಶೆ

ತನ್ನ ಎಲ್ಲಾ ಆತ್ಮವಿಶ್ವಾಸ ಮತ್ತು ಮಹತ್ವಾಕಾಂಕ್ಷೆಯನ್ನು ಕಳೆದು ಕೊಂಡಾಗ ದೇವರು ಮೋಶೆಯನ್ನು ಕರೆದನು. ಅವನು ಇನ್ನು ಮುಂದೆ ತನ್ನನ್ನು ನಾಯಕತ್ವದ ಸಾಮರ್ಥ್ಯ ಎಂದು ನೋಡಲಿಲ್ಲ. ಕುರುಬನ ಜೀವಿತದಿಂದ ಸಂತೃಪ್ತಿಯಾಗಿದ್ದನು. ಉರಿಯುವ ಪೊದೆಯಲ್ಲಿ ದೇವರು ಮೋಶೆಗೆ ಮುಖಾಮುಖಿಯಾದನು. ಅವನು ನೆಪದ ಮೇಲೆ ನೆಪವನ್ನು ಹೇಳುವುದಕ್ಕೆ ಪ್ರಾರಂಭಿಸಿದನು. (ವಿಮೋಚನಕಾಂಡ 3:4).

ನಮ್ಮಲ್ಲಿ ಎಷ್ಟು ಜನರು ಈ ರೀತಿಯಾಗಿ ಮಾಡುತ್ತೇವೆ. ಕಾಣಿಕೆ-ನೆಪಗಳ ಮೇಲೆ ನೆಪಗಳು.

ನಮ್ಮ ಜೀವಿತಕ್ಕೆ ದೇವರ ಉದ್ದೇಶವನ್ನು ಅಪ್ಪಿಕೊಳ್ಳುವ ಬದಲು ಮೋಶೆ ಎಷ್ಟು ತೀಕ್ಷ್ಣವಾದ ತದ್ವಿರುದ್ಧ ಗಮನಿಸಿ. ಸ್ವ ದೃಷ್ಟಿಕೋನ ಮತ್ತು ಆತನ ವಿಷಯದಲ್ಲಿ ದೇವರ ದೃಷ್ಟಿಕೋನ.

ವಿಮೋಚನಕಾಂಡ 3:11 : **ಮೋಶೆ ದೇವರಿಗೆ ಫರೋಹನ ಸನ್ನಿಧಾನಕ್ಕೆ ಹೋಗುವುದಕ್ಕೂ ಇಸ್ರಾಯೇಲ್ಯರನ್ನು ಐಗುಪ್ತ ದೇಶದಿಂದ ಕರೆದುಕೊಂಡು ಬರುವುದಕ್ಕೂ ನಾನು ಎಷ್ಟರವನು ಎಂದು ಹೇಳಿದನು.**

ವಿಮೋಚನಕಾಂಡ 4:1 : **ಅದಕ್ಕೆ ಮೋಶೆ ಚಿತ್ತೈಸು ನನ್ನನ್ನು ನಂಬದೆ ನನ್ನ ಮಾತಿಗೆ ಕಿವಿಗೊಡದೆ ಹೋದಾರು?**

ವಿಮೋಚನಕಾಂಡ 4:10 : **ವಾಕ್ಚಾತುರ್ಯ ವಿಲ್ಲದವನು.**

(ವಿಮೋಚನಕಾಂಡ 4:4:13) : **ಅದಕ್ಕೆ ಮೋಶೆ ಸ್ವಾಮಿ, ಈ ಕಾರ್ಯಕ್ಕೆ ಬೇರೊಬ್ಬನನ್ನು ನೇಮಿಸಬೇಕು.** ಇದು ಮೋಶೆಯ ಸ್ವಗ್ರಹಿಕೆ, ಹಿಂಜರಿಯುವಿಕೆ, ಅಸುರಕ್ಷಿತ ಮತ್ತು ಅನರ್ಹತೆಯನ್ನು ಪ್ರತಿಬಿಂಬಿಸುತ್ತದೆ. ಆದರೆ ಈಗ ದೇವರ ದೃಷ್ಟಿಕೋನವನ್ನು ಗಮನಿಸೋಣ.

ವಿಮೋಚನಕಾಂಡ 3:10 : **ಅದರಿಂದ ನನ್ನ ಜನರಾಗಿರುವ ಇಸ್ರಾಯೇಲ್‌ರನ್ನು ಐಗುಪ್ತ ದೇಶದಿಂದ ಹೊರಗೆ ಬರ ಮಾಡುವುದಕ್ಕೆ ನಿನ್ನನ್ನು ಫರೋಹನ ಬಳಿಗೆ ಕಳುಹಿಸುತ್ತೇನೆ.**

ಮೋಶೆಯು ರಕ್ಷಕ, ಸಂರಕ್ಷಿಸುವವನು ಮತ್ತು ತನ್ನ ಜನರನ್ನು ವಿಮೋಚನೆಗೊಳಿಸುವವನು ಎಂದು ದೇವರು ನೋಡಿದನು. ಮೋಶೆಯು ತನ್ನ ಬಗ್ಗೆ ಅನುಮಾನಪಡುತ್ತಿರುವಾಗ, ದೇವರು ಅವನಿಗೆ ದೈವತ್ವದ ಸೇವೆಯ ಜವಾಬ್ದಾರಿಯನ್ನು ಕೊಟ್ಟನು. ಬಹುಶಃ ಓದುತ್ತಿರುವ ನೀವು, ದೇವರು ನಿಮ್ಮದೇ ಆದ ಕೆಲವು ಸೀಮಿತಗೊಳಿಸುವ ಸ್ವಯಂ ಗ್ರಹಿಕೆಗಳನ್ನು ಎದುರಿಸುತ್ತಿದ್ದಾನೆ. ದೇವರ ದೃಷ್ಟಿಕೋನದಿಂದ ನಿಮ್ಮನ್ನು ನೋಡುವ ಸಮಯ ಇದು.

ದೇವರನ್ನು ಮಿತಗೊಳಿಸಬೇಡಿ, ಮೋಶೆಯು 80 ವರ್ಷದವನಾಗಿದ್ದನು ದೇವರು ಅವನನ್ನು ಕರೆದಾಗ, ದೇವರ ಸಮಯವು ಮಾನವನ ನಿರೀಕ್ಷೆಗಳೊಂದಿಗೆ ವಿರಳವಾಗಿ ಹೊಂದಿಕೊಳ್ಳುತ್ತದೆ. ಮೋಶೆ ಅಸಮರ್ಪಕತೆಗಳು ದೇವರ ಶಕ್ತಿಯನ್ನು ಪ್ರದರ್ಶಿಸಿದ ವೇದಿಕೆಯಾಗಿದೆ ಎಂದು ಗ್ರಹಿಸಿದ. ಸಮರ್ಪಣೆಯು ಕೀಲಿಯಾಗಿದೆ. ಎಲ್ಲವನ್ನು ಆತನ ಪಾದದಲ್ಲಿ ಇಡುವುದು.

## ಸಿ) ದಾವಿದ



***ದೇವರು ತನ್ನ ಹೃದಯಕ್ಕಾಗಿ ದಾವಿದನನ್ನು ಆರಿಸಿಕೊಂಡನು.***

ದಾವಿದನು ಪ್ರಖ್ಯಾತ ಕುಟುಂಬದಿಂದ ಬಂದವನಲ್ಲ. ಆತನಿಗೆ ಯಾವುದೇ ಪ್ರತಿಷ್ಠಿತ ಹಿನ್ನಲೆ ಇರಲಿಲ್ಲ ಮತ್ತು ತನ್ನ ಕುಟುಂಬದವರು ಆವನನ್ನು ಕೀಳಾಗಿ ನೋಡಿದರು. ಆತನು ಅಭಿಷೇಕ ಹೊಂದಿದಾಗ್ಯೂ, ಅವನನ್ನು ಕಿರಿಮಗನೆಂದು ಕಡೆಗಣಿಸಿದರು. ಆಗಾಗ್ಗೆ ಮರೆತು ಹೋದನು. ಅವನು ಇಸ್ರಾಯೇಲ್‌ರ ಶ್ರೇಷ್ಠ ಅರಸನಾದನು.

**ದೇವರು ದಾವಿದನನ್ನು ಅವನ ಹೊರಗಿನ ತೋರಿಕೆಯಿಂದ ಆರಿಸಿಕೊಳ್ಳಲಿಲ್ಲ. ಆದರೆ ತನ್ನ ಹೃದಯಕ್ಕಾಗಿ ಅವನನ್ನು ಆರಿಸಿಕೊಂಡನು.** (1 ಸಾಮುವೇಲ್ 16:7)

ದಾವಿದನು ಘೋರವಾಗಿ ಪಾಪ ಮಾಡಿದಾಗ್ಯೂ, ತನ್ನ ಮಗನನ್ನು ತೆಗೆದುಕೊಳ್ಳುವುದರಿಂದ ದೇವರು ಅವನನ್ನು ಶಿಸ್ತಿಗೆ ಒಳಪಡಿಸಿದನು. ಅವನಿಗೆ ಇನ್ನೂ ದಯೆಯನ್ನು ತೋರಿಸಿದನು ಮತ್ತು ದಾವಿದನು ಪಶ್ಚಾತ್ತಾಪ ಪಟ್ಟಾಗಿ ಆತನು ನಂಬಿಗಸ್ಥನಾಗಿದ್ದನು. ದೇವರು ತನ್ನ ಪ್ರೀತಿಯನ್ನು ಹಿಂಪಡೆದುಕೊಳ್ಳಲಿಲ್ಲ. ಆತನು ದಾವಿದನನ್ನು ಆರಿಸಿಕೊಂಡನು.

## ಡಿ) ಶಿಷ್ಯರು

ಹನ್ನೆರಡು ಶಿಷ್ಯರು ವೈವಿಧ್ಯಮಯ ಮತ್ತು ಆಗಾಗ್ಗೆ ಪ್ರಭಾವಶಾಲಿ ಹಿನ್ನಲೆಯಿಂದ ಬಂದವರು. ಮತ್ತಾಯ ಸುಂಕದವನು. ಸಿಮೋನ್ ಛಲವಾದಿ, ಅನೇಕ ಅನಕ್ಷರಸ್ಥ ಮೀನುಗಾರರು.ಇವರು ಸಾಮಾನ್ಯ ಜನರಾಗಿದ್ದರು. ಸುವಾರ್ತೆಯಲ್ಲಿ ತೋರಿಸಿದ ಹಾಗೆ ದೋಷಪೂರಿತ ಮತ್ತು ಆಗಾಗ್ಗೆ ವಿಫಲಗೊಳ್ಳುವವರು. ಆದಾಗ್ಯೂ, ಯೇಸುಕ್ರಿಸ್ತನು ತನ್ನ ಕರೆಯುವಿಕೆಯನ್ನು ಹಿಂತೆಗೆದುಕೊಳ್ಳಲಿಲ್ಲ. ಅಪೋಸ್ತಲ ಕಾರ್ಯದ ಪುಸ್ತಕದಲ್ಲಿ, ಪಂಚಾಶತ್ತಾಮ ದಿನ ಆದ ಮೇಲೆ ಅವರ ಆಮೂಲಾಗ್ರ ಬದಲಾವಣೆಯನ್ನು ನಾವು ನೋಡುತ್ತೇವೆ. ದೈನಂದಿನ ಜನರ ಮೂಲಕ ಕೆಲಸದಲ್ಲಿ ದೇವರ ಶಕ್ತಿಯನ್ನು ಬಹಿರಂಗ ಪಡಿಸುವುದು.

ಪ್ರಿಯ ಸ್ನೇಹಿತರೇ,

ನಮ್ಮ ಅರ್ಹತೆಗಳಿಂದ ನಾವು ಆರಿಸಲಿಲ್ಲ. ಆದರೆ ಸಾರ್ವಭೌಮ ದೇವರ ಚಿತ್ತದಿಂದ ಮತ್ತು ಆತನ ತಪ್ಪದ ಪ್ರೀತಿಯಿಂದ, ಆತನ ಆರಿಸುವಿಕೆಗಳು ಮಾನವ ತರ್ಕವನ್ನು ಮೀರಿದೆ.

ತನ್ನ ಶಕ್ತಿಯನ್ನು ಪ್ರದರ್ಶಿಸುವುದಕ್ಕೆ ಆತನು ಬಲಹೀನರನ್ನು ಆರಿಸಿಕೊಳ್ಳುತ್ತಾನೆ. ಜ್ಞಾನವುಳ್ಳವರನ್ನು ನಾಚಿಕೆಪಡಿಸುವದಕ್ಕಾಗಿ ಆತನು ಮೂರ್ಖರನ್ನು ಉಪಯೋಗಿಸುತ್ತಾನೆ. ಆತನು ಇನ್ನೂ ಅಸ್ತಿತ್ವದಲ್ಲಿಲ್ಲದ ವಿಷಯಗಳನ್ನು ಅಸ್ತಿತ್ವಕ್ಕೆ ಕರೆಯುತ್ತಾನೆ. ನಾವು ಕೇಳುವ ಅಥವಾ ಯೋಚಿಸುವದಕ್ಕಿಂತ ಹೆಚ್ಚಿನದನ್ನು ಆತನು ಮಾಡಬಲ್ಲನು. ಇದು ದೇವರ ಶಕ್ತಿಯಾಗಿದೆ.

ಆತನ ಮಹಿಮೆಗಾಗಿ ಯಾರನ್ನು ಬೇಕಾದರೂ ಉಪಯೋಗಿಸುತ್ತಾನೆ. ಆತನ ಆರಿಸುವಿಕೆಗಳು ಉದ್ದೇಶಪೂರಕವಾಗಿವೆ! ನೀವು ದೇವರಿಂದ ಆರಿಸಲ್ಪಟ್ಟಿದ್ದೀರಿ ಇದನ್ನು ಜ್ಞಾಪಕವಿಟ್ಟುಕೊಳ್ಳಿರಿ.

ಆತನು ನಮ್ಮನ್ನು ಕೈಯಿಂದ ಆರಿಸಿಕೊಂಡಿದ್ದಾನೆ. ದೈವತ್ವದ ಉದ್ದೇಶಕ್ಕಾಗಿ ಉದ್ದೇಶಪೂರಕವಾಗಿ ನಮ್ಮನ್ನು ಆರಿಸಿಕೊಂಡಿದ್ದಾನೆ ಫಲವನ್ನು ಕೊಡುವುದಕ್ಕಾಗಿ. ಫಲಗಳನ್ನು ಉತ್ಪಾದಿಸಬೇಕೆಂದು ದೇವರು ನಮ್ಮಿಂದ ಅಪೇಕ್ಷಿಸುತ್ತಾನೆ.

ದೇವರು ನಮ್ಮಲ್ಲಿ ಪ್ರತಿಯೊಬ್ಬರಿಗೂ ಆತನ ಮಹಿಮೆಗಾಗಿ ಫಲವನ್ನು ಹೊಂದಿರುವ ಜೀವನವನ್ನು ನಡೆಸಲು ಅಧಿಕಾರ ನೀಡುತ್ತಾನೆ ಎಂದು ನಾನು ಪ್ರಾರ್ಥಿಸುತ್ತೇನೆ. ಯಾಕೆಂದರೆ ಆತನು ಹಿಂದಿರುಗುತ್ತಾನೆ. ಆತನು ಫಲವನ್ನು ನೋಡುತ್ತಾನೆ.

**URGENT NEED for CHRISTIAN OFFICE**

**1. COMPUTER OPERATORS**

**2. PRINTING PRESS OPERATORS**

**Contact : (+91) 98412 71858, E.mail : sam@echoofhiscall.org**

**NOTICE**

Please store the Mobile Phone numbers (+91) 98410 71858, (+91) 98412 71858 of Pastor S. Sam Selva Raj on your mobile phones.
- Editor

Posted at "Egmore RMS Patrika Channel" RNI NO. 70107/98, Postal Regn. No. TN/CH (C)/195/24-26 WPP NO. TN/PMG(CCR)/WPP-219/24-26

## Echo of His Call

**YouTube**
Please subscribe

Kindly view and subscribe our **Echo of His Call YouTube Channel** when you get time. Thanks.

- Editor

## OUR BANK DETAILS:

***1. Bank : State Bank of India***

Branch : **Triplicane, Chennai-5**
Name : **S. Sam Selva Raj**
A/C No. : **1023 2934 679**
IFSC : **SBIN 00 00 249**
SWIFT CODE : **SBI NIN BB 455**

***2. Bank : ICICI Bank***

Branch : **Anna Salai, Chennai-6**
Name : **Echo of His Call**
A/C No. : **6038 0502 2319**
IFSC : **ICIC 000 6038**

***3. Bank : State Bank of India***

**(This Account is for Tax Exemption for Indians only )**

Branch : **Triplicane, Chennai-5**
Name : **Echo of His Call Educational Trust**
A/C No. : **1023 2923 805**
IFSC : **SBIN 00 00 249**

**Google Pay: 98410 71858**
**PayPal : SAM SELVA RAJ**

*****

**E.mail : sam@echoofhiscall.org**

# ECHO OF HIS CALL

Monthly magazines in 16 languages, Bible Colleges, Postal Courses, Church Planting, Village English High School, Gospel Printing Press, Crusades, Seminars, Social Services, etc.

Annual Subscription : Rs. 100/- Life Subscription : Rs. 2000/-

The multifarious activities of **Echo of His Call Ministries** are supported by the free-will offerings and donations of God's children like you. You may support **Echo of His Call** and its activities as the Lord leads you. We need your help to send forth the Gospel to the unreached people and plant Churches.

If you would like to receive **ECHO OF HIS CALL** magazines regularly, please write to us with your e.mail Id and Cell Phone number. Whenever you change your postal or e.mail addresses, please do inform us your old and new addresses.

**Echo of His Call** is available in 16 languages in our website also. You can read them by going into the site as well as downloading them and get blessed.

Your letters, prayer requests and your financial helps (**Money Orders, Cheques or Demand Drafts, NEFT, PayPal (Sam Selva Raj, sam@echoofhiscall.org) PhonePe (98410 71858), Gpay (98410 71858), Western Union, MoneyGram, etc.**) to **ECHO OF HIS CALL** may please be sent to the address below.

Please send your **Land Phone / Mobile Phone Numbers and E.mail addresses** for updation.

Our address :

**ECHO OF HIS CALL**
10, MOHAMMED ABDULLAH 2ND STREET, CHEPAUK, CHENNAI - 600 005, INDIA
PH: (+91-44) 2852 8282, 2852 9293, 2854 7766/ Cell: (+91) 98410 71852, 95661 31858 / E.mails: sam@echoofhiscall.org / biblecor@yahoo.co.in
Websites: www.echoofhiscall.org / www.stpaulsmatriculation.org

**YOU CAN SEND YOUR DONATION ONLINE ALSO**

**RNI NO. 70107/98**
**Postal Regn. No. TN/CH/(C)/195/24-26**
**WPP NO. TN/PMG(CCR)/WPP- 219/24-26**
**Date of Publication: Second week of every month**
**Date of Posting : 9th & 10th of every month**
**Posted at "Egmore RMS Patrika Channel"**
**on 10th JULY 2025.**
**If un-delivered please return to:**
**ECHO OF HIS CALL (KANNADA)**
P.O. Box No. 2957,
**Chepauk, Chennai - 600 005, INDIA.**
**Phone: (+ 91- 44) 2852 8282, 2852 9293, 2854 7766**

***JESUS LOVES YOU!***

**To**

*GOD BLESS YOU!*

Owned and published by **S. Sam Selva Raj** from New No. 8 & 10, Old No.18 & 19, Mohammed Abdullah 2nd Street, Chepauk, Chennai-600 005 and printed by **S. Sam Selva Raj** at **Echo of His Call Printers,** New No. 8 & 10, Old No.18 & 19, Mohammed Abdullah 2nd Street, Chepauk, Chennai-600 005. Editor: **S. Sam Selva Raj.**